Member's Representation

ಶ್ರೀ ಹೆಚ್. ಸಿದ್ದವೀರಪ್ಪ.—ಸ್ಪೀಕರ್, ತಮ್ಮಲ್ಲಿ ಒಂದೆರಡು ಅಂಶಗಳನ್ನು ತಿಳಿಸಬೇಕಾಗಿದೆ. ನಿನ್ನೆಯ ದಿವಸ ನಾನು ಈ ಸಭೆಯಲ್ಲಿ ಇಲ್ಲವಾಗ ನನ್ನ ವಿಷಯದಲ್ಲಿ ಒಬ್ಬಿಬ್ಬರು ಮಾನ್ಯ ಸದಸ್ಯರು ಕಾಂಗ್ರೆಸ್ ಪಕ್ಷದವರು ಕೆಲವು ವಿಷಯಗಳನ್ನು ಮಾತನಾಡಿದರು ಎಂದು ನನಗೆ ಗೊತ್ತಾಗಿದೆ. ಅವರೇನು ಭಾಷಣ ಮಾಡಿದರು ಎನ್ನುವುದು ನನಗೆ ಅವರು ಮಾಡಿರುವ ಭಾಷಣಗಳನ್ನು ನೋಡಿದರೆ ಗೊತ್ತಾಗುತ್ತದೆ. ಅವರ ಭಾಷಣಗಳನ್ನು ನೋಡಲು ತಾವು ಅವಕಾಶ ಕೊಡಬೇಕೆಂದು ಕೇಳುತ್ತೇನೆ. ನಿನ್ನೆಯ ದಿವಸ ಇಲ್ಲಿ ಮಾತನಾಡಿದವರು ಎಂದರೆ ಶ್ರೀಮಾನ್ ವೀರಪ್ಪಗೌಡರು ಹಾಗೂ ಪುಟ್ಟಸ್ವಾಮಿಗಳು ವೈಯುಕ್ತಿಕವಾಗಿ ನನ್ನ ಮೇಲೆ ದೋಷಾರೋಪಣೆ ಮಾಡಿದರೆಂದು ಗೊತ್ತಾಗಿದೆ. ಆದರೆ ನಾನು ಅವರ ಭಾಷಣವನ್ನು ನೋಡಿ ಹೇಳುತ್ತೇನೆ. ಇದಕ್ಕೆ ತಾವು ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The Hon'ble Member may be supplied with the copies at the earliest. Thereafter I will give him an opportunity to make a personal statement.

BUDGET ESTIMATES FOR 1967-68—DEMANDS FOR GRANTS

Demand Nos. 10, 14, 16, 20, 24 and 44.

(Debate Continued)

ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ಸ್ಪೀಕರ್, ಈ ಸಭೆಯು ಮುಂದೆ ಸರಕಾರದ ಪರವಾಗಿ ಮಾನ್ಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಮಾಡುತ್ತೇನೆ.

ಮಾನ್ಯ ಸರಕಾರದವರು ಏನು ಕೋಟಿಗಟ್ಟಲೆ ರೂಪಾಯಿಗಳನ್ನು ಕೇಳುತ್ತಿದ್ದಾರೆ ಅದನ್ನು ಅವರು ಹೇಗೆ ವಿನಿಯೋಗ ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದರೆ ಅವರು ವಿನಿಯೋಗ ಮಾಡತಕ್ಕ ರೀತಿಯಲ್ಲಿ ಯಾವುದಾದರೂ ಒಂದು ಕ್ರಮ ಇದೆಯೇ ? ಯಾವುದಾದರೂ ನೀತಿ ಇದೆಯೇ ಎಂದರೆ ಅವೇನೂ ಇಲ್ಲ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. ನಾವು ಇಲ್ಲ ಏನೇ ಹೇಳಿದರೂ ಅದನ್ನು ಗಾಳಿಗೆ ತೂರಿಬಿಟ್ಟಿದ್ದಾರೆ. ಸಾಮಾನ್ಯ ಆಡಳಿತದ ವಿಚಾರವಾಗಿಯೇ ಹೇಳಬೇಕಾದರೆ ನಮ್ಮ ಬಾಂಬೆ ಭಾಗದಿಂದ ಬಂದಿರುವ ಸ್ನೇಹಿತರು ನಾವು ಮೈಸೂರಿಗೆ ಸೇರುವುದಕ್ಕೆ ಮುಂಚೆ ಬೊಂಬಾಯಿ ಪ್ರದೇಶದಲ್ಲಿ ಬಹಳ ಚೆನ್ನಾಗಿತ್ತು ಎನ್ನುವ ಅಭಿಪ್ರಾಯವನ್ನು ಅವರು ಹೇಳುತ್ತಿದ್ದಾರೆ. ತಮಗೇ ಗೊತ್ತಿರುವ ಹಾಗೆ ಮದ್ರಾಸ್‌ನಲ್ಲಿ ಕೂಡ ಆಡಳಿತ ಬಹಳ ಚೆನ್ನಾಗಿತ್ತು ಹಾಗೆಯೇ ಕೂರ್ಗ್ ಕಡೆಯಿಂದ ಬಂದಿರುವ ನಮ್ಮ ಸ್ನೇಹಿತರು ಮೈಸೂರಿಗೆ ಸೇರುವುದಕ್ಕೆ ಮುಂಚೆ ಅವರ ಭಾಗದಲ್ಲಿ ಆಡಳಿತ ಚೆನ್ನಾಗಿತ್ತು ಎಂದು ಹೇಳುತ್ತಾರೆ. ನಮ್ಮನ್ನು ಕೊಡಗಿನಲ್ಲೇ ಬಿಟ್ಟಿದ್ದರೆ ಚೆನ್ನಾಗಿತ್ತಲ್ಲ ಭಗವಂತಾ ಎಂದು ಪ್ರತಿದಿನವೂ ದೇವರ ತಲೆಯ ಮೇಲೆ ಒಂದು ಹೂವನ್ನು ಹಾಕುತ್ತಿದ್ದಾರೆ. ನಮ್ಮ ಮಾನ್ಯ ಸಿದ್ದವೀರಪ್ಪನವರೂ ಸಹ ಹಿಂದೆ ಮೈಸೂರಿನ ಆಡಳಿತ ಬಹಳ ಚೆನ್ನಾಗಿತ್ತು ಎಂದು ಹೇಳಿದರು. ನಮ್ಮ ದೇಶದ ಮುಖ್ಯ ಮಂತ್ರಿಗಳು ಇಂದು ಇಲ್ಲಿಗೆ ಎಲೆಕ್ಷನ್ ಇಲ್ಲದೆ ಬಂದು ಅಧಿಕಾರ ಕೂಡ ನಡೆಯಿಸುತ್ತಿದ್ದಾರೆ ಮತ್ತು ಅದು ಹಾಗೆ ನಡೆದುಕೊಂಡೂ ಬರುತ್ತಿದೆ. ಸಾಮಾನ್ಯ ಜನ ಕೂಡ ಇಂದಿನ ಆಡಳಿತದಲ್ಲಿ ಬಹಳ ಬೇಸರವಾಗಿದೆ ಮತ್ತು ದೇಶ ಹಾಳಾಗಿ ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದು ಸಂಸ್ಕೃತದ ಗಾದೆ ಸುಭಾಷಿತದಲ್ಲಿರುವುದು ನೆನಪಿಗೆ ಬರುತ್ತದೆ. ಅದೇನೆಂದರೆ ಸುಭಾಷಿತದಲ್ಲಿರುವ ರಸವನ್ನು ನೋಡಿ ಸಕ್ಕರೆ ಕಲ್ಲು ಅಯಿತಂತೆ. ದ್ರಾಕ್ಷಿ ಕಳಿಗುಂದಿತು, ಅಮೃತ ಹೆದರಿ ಮೇಲಕ್ಕೆ ಓಡಿಹೋಯಿತಂತೆ. ಅದೇ ರೀತಿ ನಮ್ಮ ಮೈಸೂರು ದೇಶ ವಿಶಾಲವಾದಮೇಲೆ ಮೈಸೂರಿನಲ್ಲಿದ್ದ ಸ್ವಚ್ಛವಾದ ಆಡಳಿತ ಹೆದರಿ ಆಕಾಶಕ್ಕೆ ಎಗರಿ ಹೋಗಿ ಬಿಟ್ಟಿದೆ. ಮೈಸೂರಿನಲ್ಲಿ ಈ ಆಡಳಿತ ಇರುವವರೆಗೆ ನಮಗೇನು ಅನುಕೂಲವಾಗುವುದಿಲ್ಲ ಎಂದು ಬೊಂಬಾಯಿ ಪ್ರದೇಶದಿಂದ ಬಂದಿರುವವರು ತಿಳಿದುಕೊಂಡಿದ್ದಾರೆ. ಮತ್ತು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಏನು ಮಾಡುತ್ತಿದ್ದಾರೆ ಎಂದರೆ,

ಯಾವಾಗಲೂ ನಗುತ್ತಲೇ ಇರುತ್ತಾರೆ. ಅವರ ಸಕ್ಕರೆ ನಗುವಿನಿಂದ ಏನು ಪ್ರಯೋಜನವಿಲ್ಲ. ಅವರು ತಮ್ಮ ಜನರಿಗೆ ಸಕ್ಕರೆ ಕೊಡುತ್ತಾರೆ. ಜನರಿಗೆ ಮಾತ್ರ ಸಕ್ಕರೆ ನಗು. ನಮಗೆ ಅದೂ ಇಲ್ಲ. ಇಲ್ಲಿ ತಮಗೆ ನಾನು ಕೆಲವು ವಿಚಾರಗಳನ್ನು ತಿಳಿಸುತ್ತೇನೆ ಇದಕ್ಕೆ ಯಾವ ಫೈಲುಗಳ ಅವಶ್ಯಕತೆಯೂ ಇಲ್ಲ. ಎಲ್ಲ ನಿಮ್ಮ ಮೆಂಬರುಗಳೇ ವ್ಯಕ್ತ ಮಾಡಿರುವ ವಿಚಾರಗಳು. ಇವೊತ್ತು ಇಂಟರ್ ಸ್ಟೇಟ್ ಸೀನಿಯಾರಿಟಿ ಪಟ್ಟಿಯ ಬಗ್ಗೆ ನೀವು ಯದ್ವಾ ತದ್ವಾ ಮಾಡಿರುವುದನ್ನು ನೋಡಿ ಜನರು ಅದನ್ನು ಸರಿಪಡಿಸಬೇಕೆಂದು ಹೇಳಿದರೂ ನೀವು ಅದಕ್ಕೆ ಗಮನ ಕೊಡುತ್ತಿಲ್ಲ. ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಎಜ್ಯುಕೇಷನ್ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಇಂಟರ್ ಸ್ಟೇಟ್ ಸೀನಿಯಾರಿಟಿ ಪಟ್ಟಿ ಪ್ರಕಾರ ಅನ್ಯಾಯವಾಗಿದೆ ಇದರ ಬಗ್ಗೆ ಅಪೀಲು ಹೋಗಬೇಕೆಂದು ಸರಕಾರ ದವರನ್ನು ಪರ್ಮಿಷನ್ ಕೊಡಿಯೆಂದು ಕೇಳಿದರೆ ಇದುವರೆಗೂ ಅವರಿಗೆ ಆ ಪರ್ಮಿಷನ್ನನ್ನು ಕೊಡಲಕ್ಕೆ ಸಾಧ್ಯವಾಗಲಿಲ್ಲ. ಇದರಿಂದ ಅವರಿಗೆ ತೊಂದರೆಯಾಗುವುದಿಲ್ಲವೇ? ನನಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸಲು ಅಪೀಲು ಹೋಗಬೇಕೆಂದು ಕೇಳಿದರೆ ಅವರಿಗೆ ಆ ಪರ್ಮಿಷನ್ನನ್ನು ಏಕೆ ಇಲ್ಲಿಯವರೆಗೂ ಕೊಟ್ಟಿಲ್ಲ? ಇದೊಂದು ಉದಾಹರಣೆಯೇ ಅಲ್ಲ. ಪ್ರಮೋಷನ್ ವಿಚಾರಗಳನ್ನು ನೋಡೋಣ. ಯಾವುದಾದರೂ ಒಂದು ಕಡೆಯಲ್ಲಿ ಪ್ರಮೋಷನ್ನು ನ್ಯಾಯವಾಗಿ ಕೊಡಬೇಕೋ ಅವನ್ನು ಕೊಡುತ್ತಾ ಇಲ್ಲ. ಯಾರಾದರೂ ಮಧ್ಯದಲ್ಲಿ ರೆಡ್ಡಿ ಕೋಮಿನವರು, ಎಸ್. ಸಿ. ಗುಂಪಿಗೆ ಸೇರಿದವರು ಎಂದು ಬಂತೋ ಅಲ್ಲಗೇ ಅದು ನಿಂತು ಹೋಗುತ್ತದೆ. ಆ ಲಿಸ್ಟು ಮುಂದಕ್ಕೇ ಹೋಗುವುದಿಲ್ಲ. ಯಾವ ಡಿಪಾರ್ಟುಮೆಂಟು ಬೇಕಾದರೂ ತೆಗೆದುಕೊಳ್ಳಿ ಅಲ್ಲೆಲ್ಲಾ ಇವೇ ರೀತಿಯಾಗಿದೆ. ಜನರಲ್ ಅಡ್ಮಿನಿಸ್ಟ್ರೇಷನ್ ಅವರ ಕೈಯಲ್ಲಿ ಸಿಕ್ಕಿಕೊಂಡು ನರಳುತ್ತಿದೆ. ಅಧಿಕಾರಿಗಳ ಮೇಲೆ ಯಾವಾಗಲೂ ಹಸ್ತಕ್ಷೇಪ ಮಾಡಬೇಡಿ. ನಿಮಗೆ ಬೇಕಾದಷ್ಟು ಫೈಲುಗಳು ಇವೆ. ನಮಗೆ ಯಾವ ಫೈಲುಗಳೂ ಬೇಕಿಲ್ಲ. ಎಲ್ಲ ಇಲ್ಲಿನ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಅಂಕಿ ಅಂಶಗಳನ್ನೇ ಇಲ್ಲಿ ತಮ್ಮ ಮುಂದೆ ಇಡುತ್ತಿದ್ದೇನೆ. ಇದಕ್ಕೆ ಯಾವ ಫೈಲ್ಸ್‌ಗಳೂ ಬೇಕಾಗಿಲ್ಲ. ಒಂದೊಂದು ಇಲಾಖೆಯ ಬಗ್ಗೆ ಹೇಳುತ್ತೇನೆ. ಮುಂಗ್ಡೆ ಮೇಲಿನ ಹುಣ್ಣಿಗೆ ಕನ್ನಡಿಯೇತಕ್ಕೆ ಬೇಕು? ಮುಖ್ಯ ಮಂತ್ರಿಗಳು, ಮಹಾ ಮಂತ್ರಿಗಳು. ನಮ್ಮ ಡಿಸ್ಟ್ರಿಕ್ಟ್ ಲೋಕರ್ ಮಂತ್ರಿಗಳು, ಲೋಕಲ್ ಚೀಫ್ ಮಿನಿಸ್ಟರು. ಆಮೇಲೆ ಇಲಾಖೆಯ ಸೆಕ್ರಟರಿಗಳು, ಆಮೇಲೆ ಚೀಫ್ ಇಂಜನೀಯವರು ತೆಗೆದುಕೊಳ್ಳಿ. ಅನಂತರ ಸೂಪರಿಂಟೆಂಡಿಂಗ್ ಇಂಜನೀಯರು, ಅವರು ಕೈಕೆಳಗೆ ಇರುವ ಎಕ್ಸಿಕ್ಯೂಟೀವ್ ಇಂಜನೀಯರುವ ತೆಗೆದುಕೊಳ್ಳಿ ಅವರ ಕೈಕೆಳಗೆ ಇರುವ ಅಸಿಸ್ಟೆಂಟು ಇಂಜನೀಯರು ಮತ್ತು ಅವರ ಕೈಕೆಳಗಿರು ಸೂಪರ್‌ವೈಸರು ತೆಗೆದುಕೊಳ್ಳಿ, ಮತ್ತು ಅವರ ಕೈಕೆಳಗಿರುವ ಮೇಸ್ತ್ರಿಗಳನ್ನೂ ತೆಗೆದು ಕೊಳ್ಳಿ. ಎಲ್ಲರೂ ಮೇಲಿನಿಂದ ಕೆಳಗಿನವರೆಗೆ ಒಂದೇ ಕೋಮಿಗೆ ಸೇರಿದವರೇ ಇದ್ದಾರೆ. ಇದನ್ನು ಯಾರು ಬೇಕಾದರೂ ಪ್ರೂವ್ ಮಾಡಬಹುದು. ಈ ವಿಚಾರವಲ್ಲ ತಾವು ಚಿತ್ರದುರ್ಗ ಜಿಲ್ಲೆಯ ಬಗ್ಗೆ ತಿಳಿದುಕೊಳ್ಳಬಹುದು. ಅದೇ ರೀತಿ ಧಾರವಾಡ ಜಿಲ್ಲೆ ತೆಗೆದುಕೊಳ್ಳಿ. ಇವೇನೂ ಬಹಳ ದೊಡ್ಡ ವಿಷಯವಲ್ಲ. ಎಲ್ಲವೂ ನಣ್ಣವೇ ಅಂತ ನೀವು ಹೇಳಬಹುದು. ಮುಖ್ಯಮಂತ್ರಿಗಳು, ಮಹಾ ಮಂತ್ರಿಗಳು, ರಿಜಿಸ್ಟ್ರಾರ್‌ರವರು, ಜಾಯಿಂಟು ರಿಜಿಸ್ಟ್ರಾರ್‌ರವರು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು, ಡಿಸ್ಟ್ರಿಕ್ಟ್ ಕೋ-ಆಪರೇಷನ್ ಆಫಿಸರು ಇವರೆಲ್ಲರೂ ಒಂದೇ ಕೋಮಿಗೇ ಸೇರಿದವರು. The Chief Minister may say: 'What is all this? This is ridiculous. This has not come to my notice. Some how it must have happened.' I tell you, it has not happened like that. It has happened with a definite purpose. It has happened with due notice to Ministers concerned. ಯಾವ ಇಲಾಖೆಯನ್ನೇ ತೆಗೆದುಕೊಳ್ಳಿ ನಿಮಗೆಲ್ಲ ಚೆನ್ನಾಗಿ ಗೊತ್ತಾಗುತ್ತದೆ. ಆಮೇಲೆ ಪಂಚಾಯತಿ ಇಲಾಖೆ ತೆಗೆದುಕೊಳ್ಳಿ ಮಂತ್ರಿಗಳು ಮಹಾ ಮಂತ್ರಿಗಳು, ಸೆಕ್ರಟರಿ, ಡೆಪ್ಯುಟಿ ಸೆಕ್ರಟರಿ ಹಾಗೂ ಅಂದರ್ ಸೆಕ್ರಟರಿ ತೆಗೆದುಕೊಳ್ಳಿ ಅವರ ಕೈಕೆಳಗೆ ಇರುವ ಅಧಿಕಾರಿಗಳನ್ನು ತೆಗೆದುಕೊಳ್ಳಿ. ಎಲ್ಲ ನೋಡಿದರೂ ಅವರ ಕೋಮಿಗೆ ಸೇರಿದವರೇ ಇರುತ್ತಾರೆ. ಇದೇನು ಹೀಗೆ? ನೋಡುವುದಕ್ಕೆ ಕಣ್ಣಿಲ್ಲವೇ? ಕಣ್ಣು ಕಂಡರೂ ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿಯುತ್ತದೆ ಎನ್ನುವಂತೆ ಮಂತ್ರಿಗಳು ನಮಗೇನೂ ಗೊತ್ತಿಲ್ಲ ಎಂದು ಇಲ್ಲ ಹೇಳಬಹುದು. ಯಾರೋ ಹೇಳುತ್ತಿದ್ದರಂತೆ ಅಡ್ಡಿ ದನವನ್ನು ಮೇಯುವು ದಕ್ಕೆ ಬಿಟ್ಟರೆ ಅದನ್ನು ಹೊಡದುಬಿಟ್ಟು ಓಡಿಸಿದರು ಎಂದು. ಹಾಗೆ ಆಡಳಿತ ನಡೆಯುತ್ತದೆ. ಅದಕ್ಕೇನು ಮಾಡುವುದು. ಇವೆಲ್ಲ ನನಗೇನೂ ಗೊತ್ತಿಲ್ಲ ಎಂದು ಹೇಳಬಹುದು. ಅದು ಅವರಿಗೆ ಗೊತ್ತಾಗುವುದೂ ಇಲ್ಲ ನಮಗೆ ಇದನ್ನೆಲ್ಲಾ ತೋರಿಸಲು ಫೈಲು ಬೇಕೇ? ಇದಕ್ಕೆ ಯಾವ ಫೈಲುಗಳೂ ಬೇಕಾಗಿಲ್ಲ. ಇನ್ನು ಷೆಡ್ಯೂಲು ಕ್ಯಾಸ್ಟು ಹಾಗೂ ಹಿಂದುಳಿದ ವರ್ಗಗಳವರ ಪ್ರಗತಿ ಮಾಡುತ್ತೇವೆಂದು ಹೇಳಿ ಅವರನ್ನು ಹಾಳು ಮಾಡಿದರು. ಸುಮಾರು 15 ವರ್ಷಗಳಿಂದಲೂ

(ಶ್ರೀ ಜಿ. ದುಗ್ಗಪ್ಪ)

ಆರು ಆರು ವರ್ಷಗಳಿಗೆ ಕೆಲವರಿಗೆ ಪ್ರಮೋಷನ್ ಬರಬೇಕಾಗಿತ್ತು. ಕ್ಲಾಸು ಒಂದನೇ ದರ್ಜೆಗೆ ಬರಬೇಕಾಗಿತ್ತು. ಅದನ್ನೂ ಕೊಡದೇ ಅವರ ಹೆಸರೇ ಇಲ್ಲದಂತೆ ಅವರನ್ನೂ ಮನೆಗೇ ಕಳಿಸಿಬಿಟ್ಟರು ಮತ್ತು ಅವರ ಮನೆಗೆ ಅವರು ಹೋಗಿಬಿಟ್ಟರು.

9-30 A.M.

ಸರ್ಕಾರದ ಕೈಗಾರಿಕಾ ನೀತಿಯನ್ನು, ಶ್ರೀಮಾನ್ ಸಿದ್ಧವೀರಪ್ಪನವರು ಹೇಳಿದ್ದಾರೆ. ಮೈಸೂರು ಸಂಸ್ಥಾನದ ನೀತಿಯೆಂದರೆ, ಇದುವರೆಗೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾತ್ರ ಬೆಳೆಸಿಕೊಂಡು ಬಂದಿದ್ದಾರೆ. ದೊಡ್ಡ ಕೈಗಾರಿಕೆಗಳು ಚೆನ್ನಾಗಿ ಬೆಳೆದು ಅಭಿವೃದ್ಧಿ ಹೊಂದಬೇಕಾದರೆ ಸಣ್ಣ ಪ್ರಮಾಣದ ಕೈಗಾರಿಕೆಗಳು ಬೆಳೆದು ಬರಬೇಕು. ಈ ನೀತಿಯನ್ನು ಕೇಂದ್ರ ಸರ್ಕಾರದವರು 1956ರಿಂದಲೂ ಅಳವಡಿಸಿಕೊಂಡು ಬಂದಿದ್ದಾರೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಸಹ ಅದನ್ನು ಅಳವಡಿಸಿಕೊಂಡಿದ್ದಾರೆ. ಆದರೆ ಇವರು ಬೆಳೆಸಿಕೊಂಡು ಬಂದಿರುವ ನೀತಿಯೇ ಬೇರೆ. ಇಲ್ಲಿ ಎಸ್ಟಿಮೇಟ್ ಕಮಿಟಿಯ ಒಂದು ರಿಪೋರ್ಟ್ ಇದೆ. ಬಹಳ ಸೊಗಸಾಗಿದೆ. ಅದರಲ್ಲಿ ಎಲ್ಲಾ ವಿವರಗಳು ಇವೆ. ಕಮಿಟಿಯು ಸದಸ್ಯರುಗಳು ಮದ್ರಾಸ್ ಮತ್ತು ಆಂಧ್ರ ರಾಜ್ಯಗಳಿಗೆ ಹೋಗಿ ಅಲ್ಲಿ ನೋಡಿಕೊಂಡು ಬಂದು ಆ ಬಗ್ಗೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಈಗ ಕೈಗಾರಿಕಾ ಶಾಖೆಯ ಉಪ ಮಂತ್ರಿಗಳಾಗಿರುವ ಶ್ರೀ ಅಪ್ಪಣ್ಣನವರೇ ಈ ಕಮಿಟಿಯ ಅಧ್ಯಕ್ಷರಾಗಿದ್ದರು. ಅವರು ಮಾಡಿರುವ ಸೂಕ್ತ ಸಲಹೆಗಳನ್ನು ಗೌವರ್ನಮೆಂಟ್ ಆರ್ಡರ್ ಆಗಿ ಪರಿವರ್ತನೆ ಮಾಡಿ ಆದರಂತೆ ಕಾರ್ಯಗತ ಮಾಡಿದರೆ ದೇಶಕ್ಕೆ ಎಷ್ಟೋ ಕ್ಷೇಮವಾಗುತ್ತದೆ. ನಮ್ಮ ಕನ್ನಡಿಗರು ಹೊರ ದೇಶಗಳಿಗೆ ಹೋಗಿ ಪರಿಶ್ರಮ ಹೊಂದಿ ಬಂದಾಗ, ಅವರಿಗೆ ಸಾಕಷ್ಟು ಪುರಸ್ಕಾರ ಇಲ್ಲಿ ಸಿಗದೆ ಬೇರೆ ರಾಜ್ಯಗಳಿಗೆ ಹೋಗುತ್ತಿದ್ದಾರೆ. ಇದನ್ನು ನೋಡಿದರೆ ಹೊಟ್ಟೆ ಉರಿಯುತ್ತದೆ. ಕೈಕಾರಿಕೆ ಬಗ್ಗೆ ಹೆಚ್ಚಿನ ಪರಿಶ್ರಮ ಹೊಂದಿರುವವರನ್ನು ನಮ್ಮ ರಾಜ್ಯದಲ್ಲಿ ಕೇಳುವವರೇ ಇಲ್ಲ. ಎಸ್ಟಿಮೇಟ್ ಕಮಿಟಿ ಸದಸ್ಯರು ಮದ್ರಾಸ್‌ಗೆ ಟೂರ್ ಹೋದಾಗ, ಮತ್ತು ಹೈದರಬಾದಿಗೆ ಹೋದಾಗ, ಅಲ್ಲಿ ನಮ್ಮ ರಾಜ್ಯದವರು ಕೆಲಸ ಮಾಡುತ್ತಿದ್ದರು. ಅವರು ನಮ್ಮನ್ನು ನೋಡಿ ಮೈಸೂರು ರಾಜ್ಯದಲ್ಲಿ ಯಾರೂ ಕೇಳುವವರೇ ಇಲ್ಲವೆಂದು ಹೇಳಿದರು. ಬೇರೆ ರಾಜ್ಯಗಳವರು ಕೈಗಾರಿಕೆಗಳಲ್ಲಿ ಪರಿಶ್ರಮ ಹೊಂದಿರುವವರಿಗೆ ಕೊಡುವ ಅನುಕೂಲಗಳನ್ನು ನಮ್ಮವರು ಕೊಡುತ್ತಿಲ್ಲ. ಹೈದರಬಾದಿನಲ್ಲಿ ನಮ್ಮ ಕಡೆಯ ಒಬ್ಬ ಇಂಜಿನಿಯರಿಗೆ ನೀನು ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವವರಿಗೆ ಹೈದರಬಾದ್ ಬಿಟ್ಟು ಹೋಗಬಾರದೆಂದು ಹೇಳಿದರಂತೆ ಟೆಕ್ನಿಕಲ್ ಕ್ವಾಲಿಫೈಡ್ ಆದವರು ಪರದೇಶಕ್ಕೆ ಹೋಗಿ ಬಂದಮೇಲೆ, ಬೇರೆ ರಾಜ್ಯಗಳವರು ಏನು ಒಂದು ಪ್ರೊತ್ಸಾಹ ಕೊಡುತ್ತಿದ್ದಾರೆ ಅದರಂತೆ ನಮ್ಮ ಸರ್ಕಾರದವರು ಕೊಡುತ್ತಿಲ್ಲ. ಒಬ್ಬ ಡಾಯೆಂಟ್ ಡೈರೆಕ್ಟರನ್ನು ಇವರು ಇಟ್ಟಕೊಂಡಿದ್ದಾರೆ, ಅವರು ತಮಗೆ ಬೇಕಾದವರಿಗೆ ಮಾತ್ರ ಪರ್ಮಿಟ್ ಕೊಡುತ್ತಿದ್ದಾರೆ. ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪ್ರಾರಂಭಮಾಡಬೇಕೆಂದು ನಮ್ಮ ರಾಜ್ಯಕ್ಕೆ ಬರುವವರಿಗೆ ಮದ್ರಾಸ್ ರಾಜ್ಯದವರು ಕೊಡುತ್ತಿರುವ ಒಂದು ಸೌಲಭ್ಯಗಳನ್ನು ನಮ್ಮ ರಾಜ್ಯದವರು ಕೊಡುತ್ತಿಲ್ಲ. 10 ಸಾವಿರ ರೂಪಾಯಿಗಳು ಬಂಡವಾಳ ಹಾಕಿ ಒಂದು ಸಣ್ಣ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕಾದರೆ ಎಲ್ಲಾ ರೆಕಾರ್ಡ್‌ಗಳನ್ನು ಸರ್ಕಾರಕ್ಕೆ ಬರಬೇಕಾಗಿದೆ. ಡಾಯೆಂಟ್ ಡೈರೆಕ್ಟರ್ ಹುದ್ದೆಯನ್ನು ತೆಗೆದುಹಾಕಬೇಕೆಂದು ಸಲಹೆ ಮಾಡುತ್ತೇನೆ. ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಮುಂದೆ ಬಂದವರಿಗೆ ಮಾರ್ಗದರ್ಶನ ಮಾಡುವವರು ಯಾರೂ ಇಲ್ಲ. ಅವರುಗಳು ಕೆಳಗಿನಿಂದ ಹಿಡಿದು ಮೇಲಿನವರೆಗೆ ಇರುವ ಕಂಬಗಳನ್ನು ಸುತ್ತಿ ಸುತ್ತಿ ಎರಡು ವರ್ಷಗಳಾದರೂ ಕೈಗಾರಿಕೆಯನ್ನು ಸ್ಥಾಪನೆ ಮಾಡಲು ಅವಕಾಶ ಆಗುತ್ತಿಲ್ಲ. ಇಂಡಸ್ಟ್ರಿಯಲ್ ಎಸ್ಟೇಟ್‌ಗಳನ್ನು ನೋಡಬೇಕಾದರೆ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮದ್ರಾಸ್ ಮತ್ತು ಹೈದರಬಾದ್‌ಗೆ ಹೋಗಿ ನೋಡಿಕೊಂಡು ಬಂದರೆ ತಿಳಿಯುತ್ತದೆ. ಮದ್ರಾಸ ನಲ್ಲಿರುವ ಗಿಂಡಿ ಎಸ್ಟೇಟ್‌ಗೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅದೇ ಗುಲ್ಬರ್ಗದಲ್ಲಿ ಒಂದು ಎಸ್ಟೇಟ್ ಇದೆ. ಅಲ್ಲಿ ಏದ್ಯುಚಕ್ತಿ ಇವರೇ ನೀರು ಇರುವುದಿಲ್ಲ, ನೀರು ಇದ್ದರೆ ಜನರು ಇರುವುದಿಲ್ಲ. ಕಮಿಟಿಯವರು ಏನಾದರೂ ಅಲ್ಲಿಗೆ ಹೋಗುವ ಕಾಲದಲ್ಲಿ ಸ್ವಲ್ಪ ಚೆನ್ನಾಗಿ ಇಟ್ಟಿರುತ್ತಾರೆ. ಇನ್ನು ಮುಂದೆಯಾದರೂ ಯಾವ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ಪ್ರಾರಂಭವಾಗಬೇಕಾದರೆ ನಮ್ಮವರೇ ಮಾಡಬೇಕೆನ್ನುವುದನ್ನು ಬಿಡಿ. ನಮ್ಮವರು ಬಂದರೆ ಮಾತ್ರ ಅನುಕೂಲ ಮಾಡಿಕೊಡುತ್ತೇವೆ ಎನ್ನುವುದು ತಪ್ಪು. ಈ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ. ಇದನ್ನು ಹೇಳಿದ ಮೇಲೆ ಸಂಬಂಧಪಟ್ಟ ಆಫೀಸರ್ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗ

ಬೇಡಿ. ಇದರ ವಿಚಾರವೇನು ಎಂಬುದನ್ನು ಮೊದಲು ತೀರ್ಮಾನ ಮಾಡಿ. ತುಮಕೂರು ಜಿಲ್ಲೆಯಲ್ಲಿ ಒಂದು ಸಿಮೆಂಟ್ ಕಾರ್ಖಾನೆಯಿದೆ. ಈ ಕಾರ್ಖಾನೆಯಿಂದ ನಮ್ಮ ಸರ್ಕಾರದವರು ಲಕ್ಷ ಗಟ್ಟಲೆ ಬೆಲೆಯ ಸೀಮೆಂಟ್ ಕೊಂಡುಕೊಳ್ಳುತ್ತಾರೆ. ಆ ಕಂಟ್ರಾಕ್ಟ್ ಯಾವುದೆಂದರೆ : The Mysore Cements Ltd., Ammasandra, Tumkur District. ಇವರೊಡನೆ ಮೈಸೂರು ಸರ್ಕಾರದವರು ನೇರವಾಗಿ ಕಂಟ್ರಾಕ್ಟ್ ಮಾಡಿಕೊಂಡದ್ದು. It is a big Scandal. ಇವರು ಏನು ಮಾಡಿದರೆಂದರೆ, ಅವರಿಗೆ ನೇರವಾಗಿ ಪೇಮೆಂಟ್ ಮಾಡಿದರು. ಅದನ್ನು ಅಕೌಂಟೆಂಟ್ ಜನರಲ್ ಅವರು ನೋಡಿ ಹೇಳಿದರು : The Mysore Government purchases large quantity of cement from Mysore Cements, Ltd., Ammasandra, Tumkur District. The contract is an all India one and the Mysore Government has to make payments to the Central Government. But instead of that the Mysore Government made a direct payment to the Factory. Then the Director General of Supplies and Disposals made a reference to the Mysore Government stating that you have no business to conclude the direct contract as the Ammasandra Factory has to supply cement on all India Contract basis. This was also pointed out by the Accountant General, Mysore. Though they wrote to the Government not to make direct payments, this Government continued to make advance payments and also they advanced money to the tune of 30 to 40 lakhs of rupees. The Factory after receiving the advance did not supply the cement in time. It took 6 to 8 months to supply the cement. This is in gross violation of the instructions issued by the Director General of Supplies and Disposals. These people say they are poor and they have no money. ಇವರು ತಿಣಿಕಿ ತಿಣಿಕಿ ಭಾಷಣ ಮಾಡುತ್ತಾರೆ. 30 ಲಕ್ಷ ರೂಪಾಯಿಗಳನ್ನು ನೀವು ಅಡ್ವಾನ್ಸ್ ಕೊಡಬೇಕಾದರೆ, ಯಾವ ರೀತಿ ಕೊಟ್ಟಿರಿ. ನಿಮ್ಮ ಸ್ವಂತ ಹಣವನ್ನು ಕೊಟ್ಟಿಲ್ಲ. ಸರ್ಕಾರದ ಬೊಕ್ಕಸದಿಂದ ಕೊಟ್ಟಿದ್ದೀರಿ. ಇದೇ ರೀತಿಯ ಉಧಾರತ್ವವನ್ನು ಎಲ್ಲರಿಗೂ ತೋರಿಸಿದ್ದೀರಾ ? ತೋರಿಸುತ್ತಿಲ್ಲ. ಇದನ್ನು ತಾವು ಸರಿಯಾಗಿ ತಿಳಿದುಕೊಳ್ಳಿ.

ಇನ್ನು ಇನ್‌ಫರ್‌ಮೇಷನ್ ಇಲಾಖೆಯಲ್ಲಿರುವ ಡೈರೆಕ್ಟರ್ ಇವರ ಕಡೆಯವರೇ ಆಗಿದ್ದಾರೆ. ಏಕೆಂದರೆ ಇವರಿಗೆ ಬೇಕಾಗುವ ಇನ್‌ಫರ್‌ಮೇಶನ್ ಅವರು ಕೊಡಬೇಕಾಗುತ್ತದೆ. ಅಲ್ಲಿರುವ ಡೆಪ್ಯೂಟಿ ಡೈರೆಕ್ಟರ್ ಕೂಡ ಇವರ ಕಡೆಯವರೇ ಇದ್ದಾರೆ. ಐ.ಎ.ಎಸ್. ಆಫೀಸರ್ ರಿಟೈರ್ ಆಗಿರುವವರನ್ನು ಪುನಃ ನೇಮಕ ಮಾಡಿಕೊಂಡಿರುತ್ತೀರಿ. The Director and the Deputy Director are of their community. They are appointing retired I. A. S. Officers. They are all their own men. What is behind this ? They want to help their own people and they want to favour them. Huge amount has been spent on this Department. This has been pointed out. It is against the principles of the Central Government. It is their funeral to go wrong. So I advise you not to take that responsibility and get yourself involved in that. If you do that it is your funeral. Thank you, Sir.

Mr. SPEAKER.—Hon'ble Member has taken more time, If the members do not adhere to time schedule, others will lose their chance.

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ (ಹಡಗಲಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ವ್ಯವಸಾಯ, ಕೈಗಾರಿಕೆ ಮತ್ತು ಸಾಮಾನ್ಯಾಡಳಿತದ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ಸಲಹೆಗಳನ್ನು ಮಾಡಬಯಸುತ್ತೇನೆ. ನಿಜವಾಗಿಯೂ ನಮ್ಮ ಮುಖ್ಯ ಮಂತ್ರಿಗಳು ಸ್ತುತ್ಯವಾದ ಕಾರ್ಯ ಮಾಡಿದ್ದಾರೆ. ವ್ಯವಸಾಯ ಮತ್ತು ಕೈಗಾರಿಕೆ ಎನ್ನತಕ್ಕಂಥದ್ದು ನಮ್ಮ ಜನಜೀವನದ ಮತ್ತು ದೇಶದ ಅಡಳಿತದ ಎರಡು ಭುಜಗಳಿದ್ದಂತೆ.

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಈ ಸಾಮಾನ್ಯಾಡಳಿತ ಎದೆ ಇದ್ದಂತೆ ಎಂದು ಹೇಳಬಹುದು. ಈ ಪ್ರಮುಖ ಖಾತೆಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ವಹಿಸಿಕೊಂಡು ಈ ಖಾತೆಗಳ ಪ್ರಾಮುಖ್ಯತೆಯನ್ನು ಹೆಚ್ಚಿಸಿದ್ದಾರೆ. ಇದು ಸ್ತುತ್ಯವಾದ ವಿಷಯ. ನಮ್ಮ ದೇಶದ ಯಾವ ರಾಜ್ಯದಲ್ಲೂ ಮುಖ್ಯಮಂತ್ರಿಗಳು ವ್ಯವಸಾಯದ ಇಲಾಖೆಯನ್ನು ವಹಿಸಿಕೊಂಡಿರುವ ಉದಾಹರಣೆಗಳು ಇಲ್ಲವೆಂದು ಕಾಣುತ್ತದೆ. ನಮ್ಮ ರಾಜ್ಯದಲ್ಲಿ ಹೊಸದಾಗಿ ಈ ಒಂದು ಪ್ರಾಮುಖ್ಯವಾದ ಖಾತೆಯನ್ನು ಮುಖ್ಯಮಂತ್ರಿಗಳು ವಹಿಸಿಕೊಂಡು ಮಾರ್ಗದರ್ಶಕರಾಗಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನಮ್ಮ ವಿರೋಧಪಕ್ಷ ದವರು ಮಾತನಾಡುತ್ತಿರುವುದನ್ನು ನೋಡಿದರೆ ಅದು ದೊಂಬರುಡೋರ್ ಬಾರಿಸಿದ ಹಾಗೆ ಆಗಿದೆ. ಅದರಲ್ಲಿ ಅರ್ಥವಿಲ್ಲ. ಮಾನ್ಯ ಶ್ರೀ ಸಿದ್ಧವೀರಪ್ಪನವರು ಭಾಷಣ ಮಾಡಿದ್ದನ್ನೂ ನಾನು ಕೇಳಿದೆ. ಅವರು ಬಸವಣ್ಣನವರ ವಚನವನ್ನು ಹೇಳಿದರು. ಅದೇ ಬಸವಣ್ಣನವರು ಹೇಳಿದ ಕೆಲವು ನುಡಿ ಗಳನ್ನು ಇಲ್ಲಿ ಹೇಳಬೇಕಾಗಿ ಬಂದಿದೆ. "ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ" ಎಂಬ ತತ್ವಕ್ಕೆ ಮಾನ್ಯ ಶ್ರೀ ಸಿದ್ಧವೀರಪ್ಪನವರು ವಿರೋಧವಾದ ಹಾಗೆ ನನಗೆ ಭಾಸವಾಯಿತು. ಅವರು ಬಾಯಲ್ಲಿ ಆ ತತ್ವಗಳನ್ನು ಹೇಳಿ ಮಾತ ನಾಡುವುದು ಬೇರೆ ತರಹದಲ್ಲಿ ಇದ್ದಹಾಗೆ ನನಗೆ ತೋಚಿತು. ಆ ರೀತಿಯಾಗಿ ಅವರು ಮಾತ ನಾಡಿದ್ದು ನನಗೆ ಬಹಳ ವಿಷಾದನೀಯವಾಗಿದೆ. ನಾನು ಈ ಸಭೆಗೆ ಮೊದಲು ಬಂದಾಗ ಮಾನ್ಯ ಶ್ರೀ ಸಿದ್ಧವೀರಪ್ಪನವರು ಮತ್ತು ಮಾನ್ಯ ಶ್ರೀ ಚನ್ನಬಸಪ್ಪನವರು ಬಹಳ ದೊಡ್ಡವರು, ನುರಿತ ಪಾರ್ಲಮೆಂಟೇರಿಯನ್ಸ್ ಎಂದು ತಿಳಿದುಕೊಂಡು ಅವರ ಗಂಭೀರವಾಣಿಗಳನ್ನು ಕೇಳಬೇಕೆಂದು ನಾನು ಬಯಸಿದ್ದೆ. ಆದರೆ ಇಲ್ಲಿ ಒಮ್ಮೊಮ್ಮೆ ನೋಡಿದರೆ ಇವರು ಇಲ್ಲಿ ಮಾತನಾಡುವುದನ್ನು ಗಮನಿಸುತ್ತಾ ಹೋದರೆ, ನನಗೇನು ಗೊತ್ತಾಗುತ್ತದೆಂದರೆ, ಒಳ್ಳೆಯ ಮಳೆಗಾಲದಲ್ಲಿ ಕಪ್ಪೆಗಳು ಗೊಟರ್, ಗೊಟರ್ ಎಂಬುದಾಗಿ ಕೂಗಿಕೊಳ್ಳುವ ಹಾಗೆ ಅನೇಕ ವೇಳೆ ಸಭೆಯ ನಭ್ಯತೆಯನ್ನು ಪಾಲಿಸುವ ರೀತಿಯಲ್ಲ ಇಲ್ಲಿ ಮಾತನಾಡುತ್ತಿದ್ದಾರಲ್ಲಾ ಎಂದು ಅನ್ನಿಸುತ್ತಾ ಇದೆ.

Sri H. M. CHANNABASAPPA (Periyapatna).—On a point of explanation, Sir.

(*Sri G. Duggappa interrupted*)

Mr. SPEAKER.—I do not approve what was said by the other member, but Hon'ble Member, Sri Duggappa is taking it to the extreme. He should not cultivate it as a habit; unconsciously it comes out. I have heard two names mentioned by Sri Sogi. I will give Sri Channabasappa a chance to explain after Sri Sogi concludes.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರು ಹೇಳಿದ್ದನ್ನು ಕೇಳಿ ನಾವು ಸುಮ್ಮನೆ ಕುಳಿತರೆ ನಮ್ಮಲ್ಲಿ ಸತ್ಯವೇ ಇಲ್ಲವೆಂದು ಮಾತನಾಡುತ್ತಾರೆ. ಆದರೆ ನಾವು ಏನೋ ಉತ್ಸಾಹ ಶಾಲಗಳಾಗಿ ಗಂಭೀರದಿಂದ ಒಂದು ಘನತೆ, ಗೌರವಗಳಿಂದ ಈ ಸಭೆಯ ಹಕ್ಕು ಭಾಧ್ಯತೆಗಳನ್ನು ಕಾಪಾಡಿಕೊಂಡು ಹೋಗಬೇಕೆಂದು ಆಡಳಿತ ಪಕ್ಷದವರು ಹೋಗುತ್ತಿದ್ದರೂ ಅಂಥಾದ್ದನ್ನು ಅವರು ಆಡಳಿತ ಪಕ್ಷದ ಒಂದು ದೌರ್ಬಲ್ಯವೆಂದು ಭಾವಿಸುವುದಾದರೆ ಅದು ನಿಜವಾಗಿ ತಪ್ಪಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಹಾತ್ಮ ಗಾಂಧಿಯವರು ಒಂದು ಮಾತನ್ನು ಕಂಡಿಯಲ್ಲ ಹೇಳಿದ್ದಾರೆ. ಅದೇನೆಂದರೆ "ಪಹಲೇಕರೋ, ಪೀಛೇಕಹೋ, ಜ್ಯಾದಾಕರೋ, ಕಮಕಹೋ" ಎಂದು. ಈಗ ಏನಾಗಿದೆಯೆಂದರೆ ಜ್ಯಾದಾ ಕಹೋ, ಕಮ್ ಕರೋ ಎಂದು ಹೇಳುವ ಹಾಗೆ ಆಗಿದೆ. ಗಾಂಧೀಜಿ ಭಕ್ತರಾದಂತ ಮಾನ್ಯ ಶ್ರೀ ಸಿದ್ಧವೀರಪ್ಪನವರು ನಮ್ಮ ಪೂಜ್ಯ ಮಹಾತ್ಮ ಗಾಂಧಿಯವರು ಹೇಳಿದ ತತ್ವವನ್ನು ಉಲ್ಲಾಮಾಡಿ ನಡೆಯುತ್ತಿದ್ದಾರೆಂದು ನನಗೆ ಕಾಣುತ್ತಿದೆ. ಈಗ ಆಕಸ್ಮಾತ್ ಏನಾದರೂ ತೊಂದರೆಗಳು ಇದ್ದರೆ ಅವೆಲ್ಲವೂ ಹಿಂದಿನ ಮಾನ್ಯ ಮಂತ್ರಿಗಳು ಆಡಳಿತ ಮಾಡುತ್ತಿದ್ದಾಗ್ಗೆ ಆಗಿರತಕ್ಕ ತಪ್ಪುಗಳು. ಅವುಗಳ ಒಂದು ಪ್ರತಿಫಲವನ್ನು ನಾವು ಈಗ ಅನುಭವಿಸುತ್ತಿದ್ದೇವೆ. ಅಂತಹವು ಗಳನ್ನು ಸರಿಪಡಿಸಬೇಕಾದರೆ ಬಹಳ ಕಾಲವಾಗುತ್ತದೆ. ಇವೆಲ್ಲವೂ ಮುಂದೆ ಖಂಡಿತವಾಗಿ ಸರಿ ಹೋಗುತ್ತದೆ. ಅವುಗಳ ಬಗ್ಗೆ ಕೆಲವು ವಿಚಾರಗಳನ್ನು ವಿಶ್ವಾಸದಿಂದ ಹೇಳಬಯಸುತ್ತೇನೆ. ಈಗ ಏನಾದರೂ ತಪ್ಪುಗಳಿದ್ದರೆ ಅವರು ಮಾಡಿದಂಥ ತಪ್ಪುಗಳೇ ಹೊರತು ಮತ್ತೇನೂ ಇಲ್ಲ. ಅವುಗಳ ಪ್ರತಿಫಲವನ್ನು ಈಗ ನಾವೆಲ್ಲರೂ ಅನುಭವಿಸುತ್ತಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೆರಡು ಹೇಳಿ, ನೋಡೋಣ.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಮ್ಮ ರಾಜ್ಯದ ರೈತಭಾಂಧವರ ಮುಖ್ಯ ಜೀವನದ ಕಸುಬು ವ್ಯವಸಾಯ. ನಮ್ಮ ದೇಶದಲ್ಲಿ ಎಲ್ಲರಿಗೂ ಗೊತ್ತಿರುವ ಹಾಗೆ ಸೇಕಡ 70—80 ರಷ್ಟು ಜನ ವ್ಯವಸಾಯಾವಲಂಬಿಗಳಾಗಿದ್ದಾರೆ. ಇಂತಹ ಪ್ರಮುಖವಾದ ಖಾತೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಪಹಿಸಿದಮೇಲೆ ವ್ಯವಸಾಯ ಖಾತೆಯಲ್ಲಿ ಬಹಳ ಮಟ್ಟಿನ ಬದಲಾವಣೆ ಮಾಡಿ ಅದರ ಆಡಳಿತ ವ್ಯವಸ್ಥೆಯನ್ನು ಒಳ್ಳೆಯ ಒಂದು ರೂಪಕ್ಕೆ ತಂದಿದ್ದಾರೆ. ಇನ್ನೂ ಸುವ್ಯವಸ್ಥೆಗೆ ತರುತ್ತಿದ್ದಾರೆ. ಈ ಒಂದು ಸುಧಾರಣೆ ಹೆಚ್ಚಾಗಿ ವ್ಯವಸಾಯ ಖಾತೆಯಲ್ಲಿ ಆಯಿತೇ ಏನಾ ವ್ಯವಸಾಯ ಉದ್ಯಮದಲ್ಲಿ ಯಾವುದೇ ತರಹ ಅಭಿವೃದ್ಧಿ ಆಗಲಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಇದರಿಂದ ಹಳ್ಳಿಗಾಡಿನ ರೈತರ ಪರಿಸ್ಥಿತಿ ಹೇಗಿದೆಯೆಂದರೆ, ವ್ಯವಸಾಯದ ಬಗ್ಗೆ ಹೊಸ ಯೋಜನೆಗಳ ಪ್ರತಿಫಲ, ಲಾಭ, ರೈತಬಾಂಧವರಿಗೆ ಸಿಗದೆ ರೈತರು ಉದ್ಯಮಗಳಲ್ಲಿಯೂ ಹೆಚ್ಚಿಗೆ ಪ್ರಗತಿಯನ್ನು ಕಾಣುವುದಕ್ಕಾಗಲಿಲ್ಲ. ಅವರಿಗೆ ಸಕಾಲದಲ್ಲಿ ಗೊಬ್ಬರ ಹಾಗೂ ಬೀಜ ಸಿಗಲಿಲ್ಲ. ಬೆಳೆಗಳ ರೋಗ ನಿವಾರಣೆಗೆ ಬೇಕಾದಂಥ ಔಷಧಿಗಳು ಸಿಗಲಿಲ್ಲ. ಇದರಿಂದ ರೈತರಿಗೆ ಬಹಳವಾಗಿ ತೊಂದರೆಯಾಗಿ ಸರ್ಕಾರ ಬಯಸಿದಂಥ ರೀತಿಯಲ್ಲಿ ಹೆಚ್ಚು ಅಭಿವೃದ್ಧಿಯನ್ನು ಹಾಗೂ ಆಹಾರೋತ್ಪಾದನೆಯನ್ನು ಮಾಡುವುದಕ್ಕಾಗಲಿಲ್ಲ. ಇವತ್ತು ಏನಾಗಿದೆಯೆಂದರೆ ''ರೈತ ಕೇಳಿದ ಬೀಜ ಬಂತು ಬಿತ್ತಿದಮೇಲೆ, ಔಷಧಿಬಂತು ಬೆಳೆ ಹಾಳಾದಮೇಲೆ ರೈತಾಪಿಯೇ ನಮ್ಮ ದೇಶ ಸಂಪತ್ತು, ಕೇಳುವವರೆ ದಿಕ್ಕಿಲ್ಲ, ರೈತನ ವಿಪತ್ತು'', ಹೀಗಾಗಿ ರೈತನಾದವನನ್ನು ಕೇಳುವವರೇ ದಿಕ್ಕಿಲ್ಲ. ಇನ್ನೂ ಅವಕ್ಕೆ ನಾನಾ ಕಾರಣಗಳುಂಟು. ಈಗ ಸಾಂದ್ರ ವ್ಯವಸಾಯ ಯೋಜನೆಯನ್ನು ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ರೂಪಿಸಿದ್ದಾರೆ. ಇಂಟೆನ್ಸಿವ್ ಅಗ್ರಿಕಲ್‌ಚರರ್ ಏರಿಯಾ ಪ್ರೋಗ್ರಾಂ ಅಂದರೆ ಸಾಂದ್ರ ವ್ಯವಸಾಯ ಯೋಜನೆಗಳಿಗೆ ಮುಖ್ಯವಾಗಿ ಬೇಕಾದುದು ಸಹಕಾರ ಸಂಘಗಳ ಕಾರ್ಯ ನಿರ್ವಹಣೆ. ಆದರೆ ಈ ಯೋಜನೆಗಳಲ್ಲಿ ರೈತರಿಗೆ ಕಾಲಕ್ಕೆ ಸರಿಯಾಗಿ ಸಾಲ ಸಿಗುವ ಹೆಚ್ಚು ಪ್ರಗತಿಯನ್ನು ಸಾಧಿಸುವುದಕ್ಕೆ ಆಗಲಿಲ್ಲ. ಇದನ್ನು ನಿರಪಡಿಸಬೇಕು. ಈಗಿರತಕ್ಕ ತೊಂದರೆಗಳನ್ನು ಹೋಗರಾಡಿಸಿ ವ್ಯವಸಾಯದಲ್ಲಿ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಮಾಡಬೇಕು. ಸರ್ಕಾರದವರು ಅದನ್ನು ಖಂಡಿತವಾಗಿ ಮಾಡುತ್ತಾರೆಂದು ನನಗೆ ವಿಶ್ವಾಸವಿದೆ. ಆದಷ್ಟು ಜಾಗ್ರತೆಯಾಗಿ ಅದನ್ನು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಈಗ ಹೇಳಿದಂತೆ ವ್ಯವಸಾಯ ಖಾತೆಯಲ್ಲಿ ಸುಧಾರಣೆ ಆಗಿದೆ. ಆದರೆ ವ್ಯವಸಾಯೋದ್ಯಮದಲ್ಲಿ ಏನೂ ಆಗಲಿಲ್ಲ. ಹೆಚ್ಚುಹೆಚ್ಚಾಗಿ ನಮ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳು ದೊಡ್ಡ ದೊಡ್ಡ ಉದ್ಯಮಿಗಳಿಗೆ ಹಾಗೂ ದೊಡ್ಡ ದೊಡ್ಡ ಶ್ರೀಮಂತರಿಗೆ ಇಲ್ಲಿ ಅನೇಕ ಭಾರಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಆಹ್ವಾನ ಮಾಡುತ್ತಿದ್ದಾರೆ. ಅದೇ ರೀತಿ ವ್ಯವಸಾಯಕ್ಕೂ ಸಹಾಯಕೆ ಮಾಡಬಾರದು? ಸಹಕಾರ ಪದ್ಧತಿ ಮೇಲೆ ವ್ಯವಸಾಯ ಉದ್ದಿಮೆ ಎಂಬುದು ಒಂದು ದೊಡ್ಡ ಉದ್ಯಮವೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಈ ವ್ಯವಸಾಯದ ಉದ್ದಿಮೆಯನ್ನೂ ಸಹ ಪ್ರೋತ್ಸಾಹಕರವಾದ ರೀತಿಯಲ್ಲಿ ಬೆಳೆಸಬೇಕು. ಅದಕ್ಕೆ ಬೇಕಾದಂಥ ಯೋಜನೆಗಳನ್ನು ಕೂಡಲೇ ಕೈಗೊಳ್ಳಬೇಕು. ಇದನ್ನೂ ಒಂದು ಕೈಗಾರಿಕೆಯೆಂದು ಭಾವಿಸಬೇಕು. ಹಿಂದಿನ ಕಾಲದಲ್ಲಿ ವ್ಯವಸಾಯ ಹೇಗಿತ್ತು ಎಂಬುದು ಎಲ್ಲರಿಗೂ ಗೊತ್ತಿದೆ. ಯಾವುದೇ ತರಹ ಆಡಳಿತ ವ್ಯವಸ್ಥೆ ಇದ್ದರೂ ರೈತರು ಗುಡ್ಡದ ಎತ್ತರದವರೆಗೂ ಧಾನ್ಯದ ರಾಶಿ ಮಾಡುತ್ತಾ ಇದ್ದರು. ಅವರು ಧಾನ್ಯದ ರಾಶಿ ಮಾಡಿದರೆ ಗುಡ್ಡ ಕೂಡ ಕಾಣುತ್ತಿರಲಿಲ್ಲ. ಅದನ್ನು ಅನೇಕರು ನಾವು ಕೇಳಿದ್ದೇವೆ. ಗುಡ್ಡದ ಎತ್ತರ ಪೈರಿ ಬೆಳೆಯನ್ನು ಮಾಡುವಂಥ ರೈತರು ನಮ್ಮಲ್ಲಿ ಹಿಂದೆ ಇದ್ದರು. ಈಗಿನ ವ್ಯವಸಾಯ ಮಟ್ಟ ಏನಾಗಿದೆಯೆಂದರೆ ಆಫೀಸಿನಲ್ಲಿ ಫೈಲುಗಳು ಬೆಳೆದಿವೆಯೇ ಹೊರತು ಹೊಲದಲ್ಲಿ ಪೈರು ಬೆಳೆಯಲಿಲ್ಲ. ಇಂತಹ ಪರಿಸ್ಥಿತಿ ಉಂಟಾಗಿದೆ. ಸರ್ಕಾರ ಕೈಗೊಳ್ಳುವ ಯೋಜನೆ ಮತ್ತು ಅವನ್ನು ಕಾರ್ಯಗತಮಾಡುವ ರೀತಿಯಲ್ಲಿ ಪರಸ್ಪರ ಹೊಂದಾಣಿಕೆ ಇಲ್ಲದೆ ಮತ್ತು ಅದರ ಪ್ರತಿಫಲ ಸಿಗದೆ ರೈತರಿಗೆ ತೊಂದರೆಯಾಗಿದೆ. ಇವನ್ನು ಕೂಡಲೇ ತಪ್ಪಿಸಬೇಕು. ರೈತರಿಗೆ ಬೇಕಾದಂಥ ಟ್ರಾಕ್ಟರುಗಳ ಮತ್ತು ಪಂಪುಸೆಟ್ಟುಗಳ ವಿತರಣೆಯಲ್ಲಿ ಈಗ ತೀವ್ರತೆ ಬೇಕು. ಪ್ರತಿ ತಾಲ್ಲೂಕಿಗೂ ಕನಿಷ್ಠ ಒಂದೊಂದು ಟ್ರಾಕ್ಟರನ್ನು ಕೊಡಬೇಕು. ಪಂಪುಸೆಟ್ಟುಗಳ ವಿತರಣೆಯಲ್ಲಿ ಬಹಳ ತೊಂದರೆ ಇದೆ. ರೈತರಿಗೆ ಬೇಕಾದಷ್ಟು ಸಿಗುತ್ತಾ ಇಲ್ಲ.

ಇನ್ನು ಕಾರ್ಖಾನೆಗಳ ವಿಷಯವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ಹೊಸ ಪೇಜೆಯಲ್ಲಿ ಉಕ್ಕಿನ ಕಾರ್ಖಾನೆ ಆಗಬೇಕು. ಇದು ಬರೀ ಬಳ್ಳಾರಿ ಜಿಲ್ಲೆಯ ಸಮಸ್ಯೆ ಅಲ್ಲ. ಇಡೀ ರಾಜ್ಯದ ಪ್ರಶ್ನೆಯಾಗಿದೆಯೆಂಬುದಾಗಿ ಈ ಸಭೆಯ ಸನ್ಮಾನ್ಯ ಮಿತ್ರರು ಅನೇಕರು ಹೇಳಿದ್ದಾರೆ. ಇತರ ರಾಜ್ಯಗಳಲ್ಲಿ ಉಕ್ಕಿನ ಕಾರ್ಖಾನೆಯನ್ನು ಪಡೆಯುವುದಕ್ಕೆ ಜನತೆಯಲ್ಲಿ ಎಷ್ಟೋ ತೀವ್ರತೆ ಇದೆ. ಅಂತಹ ಒಂದು ತೀವ್ರ ಮನೋಭಾವನೆಯನ್ನು ನಮ್ಮ ಸರ್ಕಾರದವರು ಹಾಗೂ ನಮ್ಮ ರಾಜ್ಯದ

(ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ)

ಜನತೆಯೂ ಮಹಿಸಬೇಕು. ಅಂತೂ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯಾಗಬೇಕು. ಆದರೆ ಈ ರಾಜ್ಯದ ಹಿತದೃಷ್ಟಿಯಿಂದ ಅಂತಹ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ನಮ್ಮ ಸರ್ಕಾರದವರು ತೀವ್ರವಾದ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕು. ಪ್ರತಿ ತಾಲ್ಲೂಕು ಮಟ್ಟದಲ್ಲಿ ಏನಾದರೂ ಒಂದು ಕೈಗಾರಿಕೆಯ ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಸರ್ಕಾರದವರು ಈಗಲೇ ಯೋಚನೆ ಮಾಡಬೇಕು. ಆಯಾ ಸ್ಥಳದಲ್ಲಿರತಕ್ಕ ಪೊಟೆನ್‌ಷಿಯಲ್ಸ್ ಅಥವಾ ಮೂಲ ವಸ್ತುಗಳನ್ನು ಬಳಸಿಕೊಳ್ಳುವ ಯೋಜನೆಯಲ್ಲಿ ಸರ್ಕಾರದವರು ಕೂಡಲೇ ತಕ್ಕ ಯೋಜನೆಗಳನ್ನು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ.

ಇನ್ನು ಸಾರ್ವಜನಿಕ ಆಡಳಿತದ ವಿಚಾರದಲ್ಲಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಸಾರ್ವಜನಿಕ ಆಡಳಿತದಲ್ಲಿ ನಮ್ಮಲ್ಲಿರುವ ಯೋಜನೆಗಳು ನಾವು ಬಯಸಿದ ರೀತಿಯಲ್ಲಿ ಕಾರ್ಯಗತ ಆಗದೇ ಇರುವುದಕ್ಕೆ ಈಗಿನ ಆಡಳಿತದಲ್ಲಿರುವ ತೊಂದರೆಗಳೇ ಕಾರಣ. ಬರೀ ಆಡಳಿತ ವ್ಯವಹಾರದಲ್ಲಿ ಹೆಚ್ಚು ಕಾಲ ಮತ್ತು ಹಣ ವ್ಯಯವಾಗುತ್ತಿದೆ. ನಿಜವಾಗಿಯೂ ಕೂಡ ಇದರ ಒಂದು ಪ್ರತಿಫಲವನ್ನು, ಈ ಯೋಜನೆಯ ಲಾಭವನ್ನು ಪಡೆಯುವುದಕ್ಕಾಗುತ್ತಿಲ್ಲ. ಅದಕ್ಕಾಗಿ ಆಡಳಿತ ಯಂತ್ರದಲ್ಲಿರುವ ಲೋಪದೋಷಗಳನ್ನು ಪರಿಹರಿಸಿ, ಆಡಳಿತ ಯಂತ್ರ ಇನ್ನೂ ತೀವ್ರವಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕು. ಈಗ ಏನಾಗಿದೆ ಎಂದರೆ, ಅಧಿಕಾರಿಗಳು ಯಾವಾಗಲೂ ಮೀಟಿಂಗ್ ಮತ್ತು ಟೂರಿಂಗ್‌ನಲ್ಲಿರುವುದರಿಂದ ಆಫೀಸ್‌ನಲ್ಲಿ ಕುಳಿತು ಕೆಲಸ ಮಾಡುವುದೇ ಕಷ್ಟವಾಗಿದೆ. ಶಾನಕರು ಆಗಲಿ, ರೈತರುಗಳಾಗಲಿ ಆಫೀಸರ್‌ಗಳನ್ನು ನೋಡುವುದಕ್ಕೆ ಹೋದಾಗ ಅವರು ಸಿಗುವುದು ಕಷ್ಟವಾಗಿದೆ.

"ಒಂದು ತಿಂಗಳಿಗಿರುವ ಮುವ್ವತ್ತು ದಿನಗಳಲ್ಲಿ
ಹದಿನೈದು ದಿನ ಹೋಯ್ತು ಮೀಟಿಂಗಿಗೆ
ಐದಾರು ದಿನಗಳಲ್ಲಿ ಸರಕಾರಿ ರಜೆ ಬಂತು,
ಉಳಿದ ದಿನಗಳು ಬರಿಯ ಟೂರಿಂಗಿಗೇ"

ಈ ರೀತಿ ನಡೆಯುತ್ತಿರುವುದರಿಂದ ಅಧಿಕಾರಿಗಳು [ಆಫೀಸ್ ಕೆಲಸದಲ್ಲಿ ಹೆಚ್ಚಿನ ಲಕ್ಷ್ಯ ಕೊಡಲು ಸಾಕಷ್ಟು ಅವಕಾಶ ಸಿಗದೆ, ಆಡಳಿತ ಸರಿಯಾಗಿ ನಡೆಯುವುದಕ್ಕಾಗುತ್ತಿಲ್ಲ. ಅವರಿಗೆ ಮೀಟಿಂಗ್ ಜಾಸ್ತಿ ಯಿರುವುದರಿಂದ ಕೆಲಸ ಜೆನ್ನಾಗಿ, ಜಾಗ್ರತೆ ಮಾಡುವುದಕ್ಕಾಗುತ್ತಿಲ್ಲವೆಂದು ಹೇಳುತ್ತೇನೆ. ಇನ್ನು ಮುಂದೆ ತ್ವರಿತ ಗತಿಯಲ್ಲಿ ಕೆಲಸವಾಗುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಆ ಮೂಲಕ ದೇಶದ ಒಂದು ಒಳ್ಳೆಯ ಜನಜೀವನಕ್ಕೆ ಅವಕಾಶವಾಗುತ್ತದೆ. ಈ ವಿಚಾರವನ್ನು ಸರ್ಕಾರದವರು ಗಮನಿಸಬೇಕೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri H. M. CHANNABASAPPA.—During the course of his speech, the hon. Member Sri Kotrabasaviah Sogi mentioned my name and made an unwarranted remark. I am told that he is a new member of this House and a youngman and making a maiden speech. So, I would pardon that and be done with it.

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀಮಾನ್ ಸೋಗಿಯವರು ಮಾತನಾಡುವಾಗ ನನ್ನ ಹೆಸರನ್ನು ಹೇಳಿದರು. ಇವರಿಗೆ ಸಭೆಯ ಗೌರವ ಮತ್ತು ಗಾಂಧೀಜಿಯವರ ವಿಚಾರ ಗೊತ್ತಿಲ್ಲವೆಂದು ಹೇಳಿದರು. ಇವರಿಗೆ ಜೇನಿನ ಮಂತ್ರವೇ ಗೊತ್ತಿಲ್ಲದೆ ಹಾವಿನ ಹುತ್ತಕ್ಕೆ ಕೈ ಹಾಕಲು ಹೊರಟಿದ್ದಾರೆ. ಹಿಂದೆ ನಾವು ಮಾಡಿದ ಕೊಳೆಯನ್ನು ಈಗ ಅವರು ತೊಳೆಯುತ್ತಿದ್ದೇವೆಂದು ಹೇಳಿದರು. ಅದು ಏನೇನು ತಪ್ಪು ಮಾಡಿದ್ದೇವೆ ಎನ್ನುವುದನ್ನು ತಿಳಿಸಿ. ನಮಗೆ ಆ ಕಡೆಯ ಸದಸ್ಯರಲ್ಲಿ ಕೃತಜ್ಞತೆ ಮತ್ತು ಗೌರವವಿದೆ. ನಾವು ಮಾಡುವು ಕ್ವಾರರ್ ಎನಿದೆ ಅದು ಆಡಳಿತದ ಗದ್ದುಗೆ ಮೇಲಿರುವವರ ಮೇಲೆ ಏನಾ ಉಳಿದ ಸದಸ್ಯರ ಮೇಲಿ ಇಲ್ಲ. ಆ ಕಡೆಯ ಸದಸ್ಯರ ಬಗ್ಗೆ ಎಲ್ಲಾ ರೀತಿಯ ಗೌರವವೂ ನಮಗೆ ಇದೆ. ಈ ರೀತಿಯಾಗಿ ಶ್ರೀಮಾನ್ ಸೋಗಿ ಮಾತನಾಡುವುದು ನೋಡಿದರೆ ಆಡಳಿತ ಪಕ್ಷದವರು ನಮ್ಮ ಮೇಲೆ ಎತ್ತಿ ಕಟ್ಟಿ ಮಾತನಾಡಿಸುತ್ತಿದ್ದಾರೋ ಎನೋ ಎಂದು ಅನ್ನಿಸುತ್ತದೆ. ಅವರು ಆ ರೀತಿ ಮಾತನಾಡಿದರೆ ನಮಗೂ ಒಂದು ರೀತಿಯಿಂದ ಒಳ್ಳೆಯದಾಗುತ್ತದೆ.

ಹಿಂದೆ ನಾವು ಮಾಡಿದ್ದನ್ನು ಈಗ ತೊಳೆಯುತ್ತಿದ್ದೇವೆಂದು ಹೇಳುತ್ತಿದ್ದಾರೆ. ಎಷ್ಟು ಸಾಬೂನು ಹಾಕಿ ತೊಳೆದರು ಎಂಬುದರ ಬಗ್ಗೆ ವಿವರಗಳನ್ನು ಸಭೆಯ ಮುಂದೆ ಇಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ನಾವು ಬೈಯುವುದಕ್ಕೆ ಬಂದಿದ್ದೇವೆ, ಅವರು ಬೈಯಿಸಿಕೊಳ್ಳುವುದಕ್ಕೆ ಬಂದಿದ್ದಾರೆಂದು. ನಾನು ಮೊದಲನೆಯ ದಿವಸವೇ ಈ ಸಭೆಗೆ ತಿಳಿಸಿದ್ದೇನೆ; ನಮ್ಮ ಕರ್ತವ್ಯವನ್ನು ತಪ್ಪದೆ ಮಾಡುತ್ತೇವೆ. ನಿಮ್ಮ ಕರ್ತವ್ಯವನ್ನು ನೀವು ಮಾಡಿ ಎಂದು. ನಾವು ಅತ್ಯಂತ ವ್ಯಸನದಿಂದ ಸರ್ಕಾರವನ್ನು ಕ್ರಿಟಿಸೈಸ್ ಮಾಡುತ್ತೇವೆಯೇ ಏನಃ ನಗುನಗುತ್ತಾ ಮಾಡುತ್ತಿಲ್ಲ. ಇದನ್ನು ಸರ್ಕಾರದವರು ಮತ್ತು ಮಾನ್ಯಸದಸ್ಯರುಗಳು ತಿಳಿಯಬೇಕು.

Mr. SPEAKER.—I have to make two observation on this occasion; one is, personal allegations should, as far as possible, be avoided. There can be high debate, keen debate, useful debate without dragging any personal names and individuals. Another thing is, I am sitting here for long hours because I feel very much interested in the debate that is taking place. But, considerable abuse is brought in. That can be avoided; abuse is no argument. Abuse on the other hand takes away the full force of argument.

ಶ್ರೀ. ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಾವು ಹೊಸದಾಗಿ ಬಂದವರು, ಏನೂ ತಿಳಿದಿಲ್ಲವೆಂದು ಹೇಳುತ್ತಾರೆ. ಆದರೆ ನಾವು ಅವರು ಮಾತನಾಡುವ ರೀತಿಯಲ್ಲಿ ಮಾತನಾಡುತ್ತಿಲ್ಲ.

Mr. SPEAKER.—If hon. member Sri Sogi, wanted to give a personal explanation, he should have asked for permission as was done by other hon. members. I will give specific instructions, the remarks of a member whose name is not called, should not be recorded. When members simply get up and say something, I have to look for the person from whose mouth it is coming. That should not happen. If he really wants to be effective in debate, he may kindly think over my suggestion.

ಶ್ರೀ ಎಸ್. ಕೆ. ಅಮೀನ್ (ಉಡುಪಿ).—ಮಾನ್ಯ ಸಭಾಪತಿಗಳೇ, ಇವತ್ತು ನಮ್ಮ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರುವ ಆರು ಬೇಡಿಕೆಗಳ ಬಗ್ಗೆ ಕೇಳಿರುವ 35 ಕೋಟಿ 64 ಲಕ್ಷದ 40 ಸಾವಿರದ 300 ರೂಪಾಯಿಗಳಿಗೆ ಸಂಪೂರ್ಣವಾಗಿ ಬೆಂಬಲ ಕೊಡುತ್ತಾ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಇಲ್ಲಿ ಇವತ್ತು ಇಟ್ಟಿರುವ ಬೇಡಿಕೆಗಳಾದ ಸಾಮಾನ್ಯಾಡಳಿತ, ಸರಬರಾಯಿಗಳು ಮತ್ತು ವಿನಿಯೋಗಗಳು, ವೈಜ್ಞಾನಿಕ ಇರಾಖೆಗಳು, ವ್ಯವಸಾಯ, ಕೈಗಾರಿಕೆಗಳು ಮತ್ತು ಕೈಗಾರಿಕಾಭಿವೃದ್ಧಿಯ ಮೇಲಿನ ಬಂಡವಾಳ ಪೆಚ್ಚ ಇವೆಲ್ಲವೂ ನಮ್ಮ ದೇಶದ ಜನತೆಯ ಅವಶ್ಯಕವಾದ ಮೂಲ ಆಧಾರಗಳಾಗಿವೆ. ನಮ್ಮ ದೇಶದಲ್ಲಿ ಇತ್ತೀಚಿನ ದಶಕಗಳಲ್ಲಿ ಅಂದರೆ ನಮಗೆ ಸ್ವತಂತ್ರ ಬಂದಮೇಲೆ ವೈಜ್ಞಾನಿಕ ಸಂಶೋಧನೆಗಳಲ್ಲಿ ಮತ್ತು ಇನ್ನಿತರ ವಿಚಾರಗಳಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸುತ್ತಾ ಬಂದಿದ್ದೇವೆ. ಪ್ರಾಂತ್ಯ ಪುನರ್‌ವಿಂಗಡನೆಯಾದ ಮೇಲೆ ನಾವು ಸಾಕಷ್ಟು ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನ ಇಟ್ಟು ನಡೆದಿದ್ದೇವೆ. ಈಗ ಸಭೆಯ ಮುಂದಿರುವ ಬೇಡಿಕೆಗಳ ಬಗ್ಗೆ ಇರುವ ಇರಾಖೆಗಳನ್ನು ತೆಗೆದುಕೊಂಡು ಆಲೋಚನೆ ಮಾಡಿದರೆ ನಮಗೆ ಕಾಣುವಂಥಾದ್ದು, ನಮ್ಮ ದೇಶದಲ್ಲಿರುವಂಥ 50 ಕೋಟಿ ಜನತೆಯನ್ನು ಗಮನದಲ್ಲಿಟ್ಟುಕೊಂಡು ಮೂರು ಪಂಚವಾರ್ಷಿಕ ಯೋಜನೆಗಳನ್ನು ಮುಗಿಸಿದ್ದೇವೆ. ಅನೇಕ ವೈಜ್ಞಾನಿಕ ಸಂಶೋಧನೆಗಳನ್ನು ಮಾಡಿದ್ದೇವೆ. ನಾಲ್ಕನೆ ಪಂಚವಾರ್ಷಿಕ ಯೋಜನೆ ಕಡೆಗೆ ನಮ್ಮ ದೃಷ್ಟಿಯನ್ನು ಹರಿಸಿದ್ದೇವೆ. ನಾವು ವೈಜ್ಞಾನಿಕ ಸಂಶೋಧನೆಗಳಲ್ಲಿ ಕಂಡು ಕೊಂಡವಿಷಯಗಳನ್ನು ಹೊಂದಾಣಿಸಿಕೊಂಡು ಜನತೆಯಲ್ಲಿ ಹೆಚ್ಚಿನ ಮಾನವ ಶಕ್ತಿಯನ್ನು ಉಂಟು ಮಾಡಿ, ಆ ಮೂಲಕ ಜನರಿಗೆ ಹೆಚ್ಚಿನ ಉದ್ಯೋಗ ಕಲ್ಪಿಸುವುದಾಗಿದೆ. ನಾವು ಕಂಡುಕೊಂಡಂಥ ಸಂಶೋಧನೆಗಳನ್ನು ಉಪಯೋಗಿಸುವಲ್ಲಿ, ಅದನ್ನು ಬಳಕೆಗೆ ತರುವುದರಲ್ಲಿ ಸಾಕಷ್ಟು ಗಮನ ಹರಿಸಿಲ್ಲ ಎಂಬುದನ್ನು ನಾವು ಈಗಾಗಲೇ ತಿಳಿಯಬಾರದು. ಈ ಹೊತ್ತು ನಮ್ಮ ರಾಷ್ಟ್ರ ಎಚ್ಚೆತ್ತಿದೆ. ನಮ್ಮ ರಾಷ್ಟ್ರದಲ್ಲಿರತಕ್ಕ ಮಾನವ ಕೋಟಿಯನ್ನು ಹೇಗೆ ಸಂರಕ್ಷಣೆ ಮಾಡಬೇಕು ಎಂಬುದಾಗಿ ಆಲೋಚನೆ ಮಾಡುತ್ತಿರುವ ಕಾಲದಲ್ಲಿ ನಾವು ಇಲ್ಲಿ ನಮ್ಮ ರಾಜ್ಯದಲ್ಲಿಯೂ ಕೂಡ ಅದೇ ರೀತಿಯಾಗಿ ಜನತೆಯ

(ಶ್ರೀ ಎಸ್. ಕೆ. ಅಮೀನ್)

ಹಿತವನ್ನು ಸಾಧಿಸಬೇಕಾದುದು ಅವಶ್ಯಕವಾಗಿದೆ; ಅದನ್ನು ಮಾಡಲೇಬೇಕೆಂಬುದು ನಮ್ಮೆಲ್ಲರ ಆಸೆ. ಆದರೆ ಆಡಳಿತ ನಡೆಸತಕ್ಕ ಅಧಿಕಾರಿಗಳೇನಿದ್ದಾರೆ ಅವರು ಈ ದಿವಸ ಬೇರೆ ಬೇರೆ ಉದ್ದಿಮೆಗಳಲ್ಲಿ ತೊಡಗಿರತಕ್ಕ ಜನರ ಉದ್ದೇಶಗಳನ್ನು ಈಡೇರಿಸುವುದರ ಕಡೆಗೆ ಹೆಚ್ಚಿನ ಗಮನವನ್ನು ಕೊಡುತ್ತಿಲ್ಲ. ಈ ದಿವಸ ನಮ್ಮ ಅವಶ್ಯಕತೆಗಳನ್ನು ಪೂರ್ಣಗೊಳಿಸಲು ಇರತಕ್ಕ ಒಂದು ದೊಡ್ಡ ಅಡಚಣೆಯೆಂದರೆ—ನಮ್ಮ ಯೋಜನೆಯ ನಾನಾಮುಖವಾದ ಕೆಲಸಕಾರ್ಯಗಳೇನಿವೆ ಅವುಗಳನ್ನು ಒಂದು ಹೊಂದಾಣಿಕೆಯಿಂದ ಮಾಡುತ್ತಿಲ್ಲ ನಮ್ಮ ಆಡಳಿತವನ್ನು ನಡೆಸತಕ್ಕ ಅಧಿಕಾರಿಗಳು. ಆ ಒಂದು ಹೊಂದಾಣಿಕೆಯಿಂದ ನಾವು ಕೆಲಸ ಮಾಡಿದ್ದೇ ಆದರೆ ಎಂದೆಂದಿಗೂ ನಾವು ಯಾರಿಗೂ ಹಿಂದೆ ಬೀಳುವುದಿಲ್ಲ. ನಾವು ಯಾವ ಕೆಲಸವನ್ನಾದರೂ ಸಾಧಿಸಬಹುದು. ಆದುದರಿಂದ ನಾನೀಗ ತಮ್ಮಲ್ಲಿ ಆಗ್ರಹ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಜನತೆಗೆ ಅನುಕೂಲವಾಗುವಂತೆ ನಾವು ನಮ್ಮ ಯೋಜನೆಯ ಕಾರ್ಯಕ್ರಮಗಳನ್ನು ಹೊಂದಾವಣಿಕೆ ಮಾಡಿಕೊಂಡು ಮಾಡಿದ್ದೇ ಆದರೆ ಇದರಿಂದ ಜನತೆಗೆ ಹೆಚ್ಚಿನ ಲಾಭವಾಗುತ್ತದೆ, ರಾಭದಾಯಕವಾಗುತ್ತದೆ, ಹಾಗೆ ಮಾಡಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

10-00 A.M.

ನಾವು ಈ ದಿವಸ ಪ್ರಾಮುಖ್ಯವಾಗಿ ಒಂದು ವ್ಯವಸಾಯವನ್ನೇ ತೆಗೆದುಕೊಳ್ಳಲ ಅಥವಾ ಯಾವುದಾದರೊಂದು ಕೈಗಾರಿಕೆಯನ್ನೇ ತೆಗೆದುಕೊಳ್ಳಲ ಅದರಲ್ಲಿ ಆಡಗಿರತಕ್ಕ ನಮ್ಮ ಮುಖ್ಯ ಉದ್ದೇಶವೇನೆಂದರೆ, ಆ ಮೂಲಕ ಜನರಿಗೊಂದು ಉದ್ಯೋಗದ ಸೌಲಭ್ಯವನ್ನು ಒದಗಿಸಬೇಕೆಂಬುದೇ ಆಗಿದೆ. ಆದರೆ ನಾವು ಅದನ್ನು ಸಾಧಿಸದೆ ಇದ್ದಾಗ ಜನರಲ್ಲಿ ಒಂದು ಉದ್ರೇಕ ಮೂಡುವುದು ಸ್ವಾಭಾವಿಕ. ಆದುದರಿಂದ ಇತ್ತಕಡೆಗೆ ಸರ್ಕಾರದವರು ತಮ್ಮ ಗಮನವನ್ನು ಬೇಗ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಾನು ತಮ್ಮೆಲ್ಲರಲ್ಲೂ ಬಹು ಮುಖ್ಯವಾಗಿ ಈಗ ಅರಿಕೆಮಾಡಿಕೊಳ್ಳಬೇಕಾಗಿರತಕ್ಕ ಒಂದು ಬಹಳ ಪ್ರಾಮುಖ್ಯವಾದ ವಿಚಾರ ಏನೆಂದರೆ—ನಮ್ಮ ರಾಜ್ಯದಲ್ಲಿರತಕ್ಕ ಮೀನುಗಾರಿಕೆಗೆ ಸಂಬಂಧಪಟ್ಟ ವಿಷಯ ಅದು. ನಾನು ಮೀನುಗಾರನಾಗಿ ಹುಟ್ಟಿ, ಮೀನುಗಾರನಾಗೇ ಬೆಳೆದವನು. ಆದುದರಿಂದ ನಾನು ಸ್ವಲ್ಪ ಒತ್ತಾಯಪೂರ್ವಕವಾಗಿ ಈ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಇಲ್ಲಿಯವರೆಗೂ ನಾನು ನೋಡಿದ್ದರಲ್ಲಿ ಯಾವ ಮಾನ್ಯ ಸದಸ್ಯರೂ ಈ ಮೀನುಗಾರಿಕೆ ವಿಷಯದಲ್ಲಿ ಅಷ್ಟು ಒತ್ತಾಯಪೂರ್ವಕವಾಗಿ ಮಾತನಾಡಿದ್ದನ್ನು ನಾನು ನೋಡಲಿಲ್ಲ. ಆದರೆ ಈ ವಿಚಾರದಲ್ಲಿ ಕೆಲವು ಸದಸ್ಯರು ಹೇಳಿದಂತೆ ಅವರಿಗೂ ಒಂದು ಚಿಂತೆ ಹಾಗೂ ಅನುಕಂಪ ಏರಬಹುದು. ಆದರೆ ಅವರಿಗೆ ಇದರಲ್ಲಿರತಕ್ಕ ಅನುಕಂಪ ಎಷ್ಟರಮಟ್ಟಿನದು ಎಂಬುದು ನನಗೆ ಗೊತ್ತಿದೆ. ನನಗೆ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿ ಸುಮಾರು 180 ಮೈಲಿಗಳ ಸಮುದ್ರ ಕರಾವಳಿ ಪ್ರದೇಶವಿದೆ. ಜೊತೆಗೆ ಒಳನಾಡಿನಲ್ಲೂ ಸಾಕಷ್ಟು ಕೆರೆ ಬಾವಿಗಳ ಸೌಲಭ್ಯಗಳಿವೆ. ಆದುದರಿಂದ ಸರ್ಕಾರದವರು ಈ ದಿವಸ ಈ ಬಡಪ್ಯತ್ತಿಯಲ್ಲಿರತಕ್ಕ ಜನರ ಕಡೆಗೆ ತಮ್ಮ ಒಂದು ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ. ಮೀನುಗಾರಿಕೆಯು ದೇಶದ ಸಂಪತ್ತನ್ನು ಬೆಳೆಸತಕ್ಕ ಒಂದು ಉದ್ದಿಮೆ. ಈ ದಿವಸ ನಮ್ಮ ರಾಜ್ಯಪೊಂದರಲ್ಲೇ ಅಲ್ಲ, ನಮ್ಮ ರಾಷ್ಟ್ರ ಒಂದರಲ್ಲೇ ಅಲ್ಲ, ಇಡೀ ಅಂತರಾಷ್ಟ್ರೀಯ ಪ್ರಶ್ನೆಯಾಗಿ ನಿಂತಿದೆ, ಜನರಿಗೆ ಹೇಗೆ ಆಹಾರವನ್ನು ಒದಗಿಸುವುದ ಎಂಬುದು. ಜನಸಂಖ್ಯೆ ಒಂದು ಕಡೆ ಹೆಚ್ಚುತ್ತಿದೆ. ಎಲ್ಲ ನೋಡಿದರೂ ಆಹಾರಕ್ಕಾಗಿ ಜನತೆ ಹೇಚಾಡುತ್ತಿದೆ. ಇಂಥ ಸನ್ನಿವೇಶದಲ್ಲಿ ಹೇಗೆ ಮಾಡಜೇಕೆಂದು ಜನತೆ ಆಲೋಚನೆಯಲ್ಲಿ ಬಿದ್ದಿದೆ. ನಮ್ಮ ಪೃಥ್ವಿಯಮೇಲೆ ಭೂಭಾಗ ಇರತಕ್ಕದ್ದು ಮೂರನೆಯ ಒಂದು ಭಾಗವಾದರೆ, ಜಲಭಾಗ ಮೂರನೆ ಎರಡು ಭಾಗವಿದೆ. ಇಲ್ಲಿಯವರೆಗೂ ಮಾನವನು ತನ್ನ ವೈಜ್ಞಾನಿಕ ಶಕ್ತಿಯಿಂದ ಭೂಭಾಗದಲ್ಲಿರತಕ್ಕ ಉತ್ಪತ್ತಿಯನ್ನೆಲ್ಲಾ ತೆಗೆದುಕೊಂಡಿದ್ದಾಯಿತು. ಇನ್ನು ಮುಂದಕ್ಕೆ ಪ್ರಪಂಚದಲ್ಲಿರತಕ್ಕ ಮನುಷ್ಯಕೋಟಿ ಬೆಳೆದು ಬಾಳಬೇಕಾಗಿದ್ದರೆ ಇನ್ನು ಅಂತರಾಷ್ಟ್ರೀಯ ದೃಷ್ಟಿಯಲ್ಲಿ ಇರತಕ್ಕ ಒಂದೇ ಒಂದು ಮಾರ್ಗ ಎಂದರೆ ಅದು ಸಮುದ್ರಗಳಲ್ಲಿರತಕ್ಕ ಅಂದರೆ ಅದರಲ್ಲಿ ಆಡಗಿರತಕ್ಕ ಆಹಾರ ವಸ್ತುಗಳನ್ನು ನಾವು ಕಾಡುಕೊಳ್ಳಬೇಕಾದ ಕಾಲ ಸನ್ನಿಹಿತವಾಗಿದೆ. ನಮ್ಮ ಒಳನಾಡಿನಲ್ಲಿ ಸುಮಾರು 30 ಸಾವಿರ ಕೆರೆಗಳಿವೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಅವುಗಳಲ್ಲಿ 4 ಸಾವಿರ ದೊಡ್ಡ ಕೆರೆಗಳಿವೆ. ಅವುಗಳಲ್ಲಿ ಮೀನುಗಾರಿಕೆ ಸಾಕಾಣಿಕೆಗೆ ಬಹಳ ಅವಕಾಶವಿದೆ, ಈ ದಿವಸ ನಮ್ಮ ಈ ಮೀನುಗಾರಿಕೆಯ ಅಭಿವೃದ್ಧಿಗಾಗಿ ಬಡ್ಜೆಟ್ಟಿನಲ್ಲಿ ಕಾಣಿಸಿರತಕ್ಕದ್ದು ಒಂದು ಕೋಟಿ ಹದಿನಾಲ್ಕು ಲಕ್ಷ

ರೂಪಾಯಿಗಳು ಮಾತ್ರ. ಮುಖ್ಯವಾಗಿ ನಮ್ಮಲ್ಲಿರತಕ್ಕ 4 ಸಾವಿರ ದೊಡ್ಡ ದೊಡ್ಡ ಕೆರೆ ಬಾವಿಗಳಿಗೆ ಈ ಪೊಬಲಗನ್ನು ಒಂದೊಂದಕ್ಕೂ ಒಂದೊಂದು ಸಾವಿರದಂತೆ ಹಂಚಿದರೆ ಖರ್ಚು ಮಾಡಿದರೆ ಅಲ್ಲಗೆ 40 ಲಕ್ಷ ರೂಪಾಯಿಗಳು ಬೇಕಾಗುವುದು. ಅಂದಾಗ ಇನ್ನು ಕರಾವಳಿಯ ಭಾಗದಲ್ಲಿ ಹಣವನ್ನು ಖರ್ಚುಮಾಡುವುದಕ್ಕೆಲ್ಲ ಅವಕಾಶವಿದೆ? ನನಗೆ ಈ ವಿಾನುಗಾರಿಕೆಯಲ್ಲಿ ಬಹಳ ಆಸಕ್ತಿಯಿರುವುದರಿಂದ ಅಧ್ಯಕ್ಷರು ನನಗೆ ಇನ್ನು ಒಂದೆರಡು ನಿಮಿಷಗಳನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನಾನು ಪ್ರಾಮುಖ್ಯವಾಗಿ ಈ ವಿಚಾರದಲ್ಲಿ ತಿಳಿಸಬೇಕಾಗಿರುವ ವಿಚಾರವಾದರೂ ಇಷ್ಟೆ: ನಾವು ಇಲ್ಲಿಯವರೆಗೂ ಕರಾವಳಿಯಲ್ಲಿ ಬಹಳ ಹೆಚ್ಚಿನ ಕಾರ್ಯಗಳನ್ನು ಸಾಧಿಸಿದ್ದೇವೆ. ಆದರೂ ಅದು ಸಾಲದು ಅದನ್ನು ಇನ್ನೂ ಹೆಚ್ಚುಮಾಡಬೇಕು. ಅದಕ್ಕೆ ಸರ್ಕಾರದವರು ಹೆಚ್ಚಿನ ಸಾಧನೆಯನ್ನು ಸಾಧಿಸಬೇಕಾಗಿದೆ; ಹೆಚ್ಚಿನ ಶ್ರಮವಹಿಸಬೇಕಾಗಿದೆ. ಇದನ್ನು ನಮ್ಮ ರಾಜ್ಯದಲ್ಲಿ ಒಂದು ಯಾಂತ್ರೀಕರಣ ರೀತಿಯಲ್ಲಿ ನಡೆಸಬೇಕಾಗಿದ್ದರೆ ಸರ್ಕಾರದವರು ಈಗೇನು ಇದಕ್ಕೆ ಹಣವನ್ನು ಒದಗಿಸಿದ್ದಾರೋ ಆದಕ್ಕೆ ದ್ವಿಗುಣವಾಗಿ ಹಣವನ್ನು ಒದಗಿಸಬೇಕಾಗಿದೆ. ಈ ದಿವಸ ನಮ್ಮಲ್ಲಿ ಯಾಂತ್ರೀಕರಣಕ್ಕೆ ಒದಗಿಸಿರತಕ್ಕ ಹಣ ಸಾಲದು. ಇದನ್ನು ಇಮ್ಮಡಿಸಬೇಕು. ಈ ದಿವಸ ನಮ್ಮಲ್ಲರತಕ್ಕ ಮೆಕನೈಜ್ಡ್ ದೋಣಿಗಳಲ್ಲಿ 30 ಮೈಲಿಗಳಿಗಿಂತ ಹೆಚ್ಚು ದೂರ ಹೋಗುವುದಕ್ಕಾಗುವುದಿಲ್ಲ. ಅದಕ್ಕಾಗಿ ದೊಡ್ಡ ದೋಣಿಗಳನ್ನು ಒದಗಿಸಬೇಕಾಗಿದೆ. ಹಿಂದೆ 1960 ರಲ್ಲಿ ಮಾನ್ಯ ಹಣಕಾಸಿನ ಸಚಿವರು ಒಂದು ಮೈಟ್‌ಹೇಪರನ್ನು ಹೊರಡಿಸಿದ್ದರು...

ಅಧ್ಯಕ್ಷರು.—ನಿಮಗೇನು ಬೇಕು ಅದನ್ನು ಹೇಳಿ, ನಿಮ್ಮ ಕಾಲಾವಕಾಶ ಮುಗಿದಿದೆ.

ಶ್ರೀ ಎಸ್. ಕೆ. ಅಮಿನ್.—ನಮಗೆ 1000 ದೋಣಿಗಳು ಬೇಕು. ನಮಗೆ ಫಿಷಿಂಗ್ ಹಾರ್ಬರುಗಳು ಬೇಕು. ಈಗ ಒದಗಿಸಿರತಕ್ಕ ಹಣ ಸಾಲದು ಅದನ್ನು ಹೆಚ್ಚಿಸಬೇಕು. ಇಷ್ಟು ಪ್ರಾರ್ಥನೆ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎರ್. ಶ್ರೀಕಂಠಯ್ಯ (ನಂಜನಗೂಡು).—ಮಾನ್ಯ ಸಭಾಪತಿಗಳೇ, ನಮ್ಮ ರಾಜ್ಯದ ಕೈಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಸಾಧಿಸಬೇಕಾಗಿದ್ದರೆ ಇಲ್ಲಿರತಕ್ಕ ಕೈಗಾರಿಕೆಗಳಲ್ಲಿ ನಾವು ಅಲ್ಪಸ್ವಲ್ಪ ಹಣವನ್ನು ಹಾಕಿದರೆ, ಅಥವಾ ಬಂಡವಾಳವನ್ನು ಹಾಕಿದರೇನೂ ನಡೆಯಲಾರದು ಎಂದು ಹೇಳಿ ಹೊರಗಡೆಯಿಂದ ಹೆಚ್ಚು ಬಂಡವಾಳ ಹಾಕತಕ್ಕ ಜನರನ್ನು ಕರೆದುತರುವುದಕ್ಕೆ ನಮ್ಮ ಸರ್ಕಾರದವರಿಗ ಪ್ರಯತ್ನಮಾಡುತ್ತಿದ್ದಾರೆ ಎಂಬುದಾಗಿ ನಾನೀಗ ವರ್ತಮಾನ ಕೇಳುತ್ತಿದ್ದೇನೆ; ಇದು ಬಹಳ ಸಂತೋಷದ ವಿಷಯ. ಆದರೆ ನಾವು ಮೈಸೂರು ರಾಜ್ಯದ ಈ ರಂಗದಲ್ಲಿ ಏನು ಪ್ರಗತಿಯನ್ನು ಸಾಧಿಸಿದ್ದೇವೆ, ನಮ್ಮಲ್ಲರತಕ್ಕ ಕೆಲವು ಕೈಗಾರಿಕೆಗಳು ಯಾವ ರೀತಿಯಲ್ಲಿ ಮುಂದುವರಿದುಕೊಂಡು ಬರುತ್ತಿವೆ, ಇಲ್ಲಿಯವರೆಗೂ ನಾವು ಸ್ಥಾಪಿಸಿರತಕ್ಕ ಕೈಗಾರಿಕೆಗಳನ್ನು ಉಳಿಸಿಕೊಂಡು ಬರುವುದಕ್ಕೆ ನಾವೇನು ಮಾಡಿದ್ದೇವೆ ಎಂಬುದನ್ನು ಪರಿಶೀಲಿಸುವುದು ಅವಶ್ಯಕ. ಉದಾಹರಣೆಗಾಗಿ ಹೇಳುವುದಾದರೆ—ನಮ್ಮ ಮಂಡ್ಯಾದಲ್ಲಿದ್ದ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ಕಾಲಕ್ಕೆ ಸರ್ಕಾರದವರು ಅದರಲ್ಲಿ ಶೇಕಡ 51 ರಷ್ಟು ಷೇರುಗಳನ್ನು ಪಡೆದಿದ್ದರು. ಅಲ್ಲದೆ ಅಲ್ಲಿ ಸರ್ಕಾರದವರ ಪರವಾಗಿ ಮ್ಯಾನೇಜ್‌ಮಾಡುವುದಕ್ಕಾಗಿ ಅಲ್ಲಿ ಒಬ್ಬ ಡೈರೆಕ್ಟರನ್ನು ನೇಮಕ ಮಾಡಿದ್ದರು. ಆ ಕಾರ್ಖಾನೆ 1934 ರಲ್ಲಿ ಸ್ಥಾಪಿತವಾಯಿತು. ಈ ಕಂಪೆನಿಯು 1934ನೆಯ ಇಸವಿಯಲ್ಲಿ ಸ್ಥಾಪನೆಯಾಯಿತು. ನನಗೆ ತಿಳಿದು ಬಂದ ಹಾಗೆ ಈ ಕಂಪೆನಿಯು ಉತ್ತರೋತ್ತರ ಕೆಲಸ ಮಾಡುವಾಗ ಸುಮಾರು ಒಂದು ಕೋಟಿ ರೂಪಾಯಿಯಷ್ಟು ರಿಸರ್ವ್ ಕ್ಯಾಪಿಟಲ್ ಇಟ್ಟುಕೊಂಡಿತ್ತು. ಈ ದಿವಸ ಕಂಪೆನಿಯ ಪರಿಸ್ಥಿತಿಯನ್ನು ಸ್ವಲ್ಪ ಸೂಕ್ಷ್ಮವಾಗಿ ನೋಡಿದರೆ, ಅದು ಸಾಲ ಮಾಡಿದ್ದು ಮಾತ್ರವಲ್ಲದೆ ಅದು ಸಿಂತು ಹೋಗಿ ಲಿಕ್ವಿಡೇಶನ್ ಸ್ಟೇಜಿನಲ್ಲಿ ಬರುತ್ತಿದೆ. ಇವತ್ತಿನ ದಿವಸ ನಂಬಲರ್ಹವಾದ ಸುದ್ದಿಯಂತೆ, ಈ ಕಂಪೆನಿಯ ಭೂಮಿಯನ್ನು ಅವರಿಗೆ ಬೇಕಾದಂತವರಿಗೆ ಮಾರಾಟ ಮಾಡುತ್ತಿದ್ದಾರೆ. ಇದಕ್ಕೆ ಕಾರಣವೇನು? ಸರ್ಕಾರದ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಒಬ್ಬರು ಇದ್ದಾರೆ. ಸಂಬಂಧಪಟ್ಟ ಮಂತ್ರಿಯವರು ಇದ್ದಾರೆ. ಪ್ರತಿ ವರ್ಷ ಬ್ಯಾಲೆನ್ಸ್ ಷೀಟ್ ಸರ್ಕಾರಕ್ಕೆ ಬರುತ್ತದೆ. ಸರ್ಕಾರದಿಂದ ನೇಮಿಸಲ್ಪಟ್ಟಂತಹ ಡೈರೆಕ್ಟರು ಇದ್ದಾರೆ, ಥೇರ್‌ಮೆನ್ ಇದ್ದಾರೆ. ಈ ಕಂಪೆನಿಯಲ್ಲಿ ಕ್ಷೋಭೆ ಬರುವುದಕ್ಕೆ ಕಾರಣವೇನು? ಇಷ್ಟು ವರ್ಷ ಸರ್ಕಾರ ಕಣ್ಣುಮುಚ್ಚಿ ಕುಳಿತಿದ್ದಾರೆಯೇ? ಒಂದು ಕೋಟಿ ರೂಪಾಯಿ ಎಲ್ಲಿ ಹೋಯಿತು? ಇದನ್ನು ಹೇಳುವಾಗ, ಯಾವುದೋ ಒಂದು ನೆನಪಿಗೆ ಬರುತ್ತದೆ. ಮೈಸೂರು ಖಾದಿ ಬೋರ್ಡಿನ ಅಡಳಿತದ ನೆನಪು ಬರುತ್ತದೆ. ಸಕ್ಕರೆಯ ಧಾರಣೆ ಎಷ್ಟು ಇದೆ? 51 ಪರ್‌ಸೆಂಟ್ ಶೇರ್ ಇರತಕ್ಕ ಸರ್ಕಾರ ಕಣ್ಣು ಬಿಟ್ಟಿಲ್ಲವೇ, ನಿಮ್ಮ ರೆಕ್ಕಪತ್ರ ಏನು, ಬ್ಯಾಲೆನ್ಸ್ ಷೀಟ್ ಏನು, ದುಡ್ಡು ಎಲ್ಲ ಹೋಯಿತು? ಅಲ್ಲಿಯ ಕೆಲಸಗಾರರು ಕೂಡ, ಆಡಳಿತದ ಬಗ್ಗೆ ವಿಚಾರಣೆ ಮಾಡ

(ಶ್ರೀ ಎಲ್. ಶ್ರೀಕಂಠಯ್ಯ)

ಬೇಕೆಂದು ಕೇಳಿದರೂ ಕೂಡ ವಿಚಾರಣಾ ಸಮಿತಿ ನೇಮಿಸಲಿಲ್ಲ. ಇದರಿಂದ ಹಣ ತಿಂದವರು ಈಚೆಗೆ ಬರುತ್ತಾರೆಂದೋ, ಅಥವಾ ಸರ್ಕಾರದ ನಿರ್ಲಕ್ಷತೆಯು ಸಾರ್ವಜನಿಕರ ಗಮನಕ್ಕೆ ಬರುತ್ತದೆಂದೋ ಎಂಬ ಒಂದು ಸಂಶಯ ಕಾಣುತ್ತದೆ. 1934ರಲ್ಲಿ ಕಂಪೆನಿ ಪ್ರಾರಂಭವಾದರೂ, 8 ವರ್ಷದ ನಂತರ ಈ ಕನ್‌ಫೆಕ್ಷನರಿ ಬೈ-ಪ್ರಾಡಕ್ಟ್ ಪ್ರಾರಂಭ ಮಾಡಿದರು. ಅವಕ್ಕೆ 20 ಲಕ್ಷ ರೂಪಾಯಿ ಇನ್‌ವೆಸ್ಟ್ ಮಾಡಿ, ಕೇವಲ 6 ತಿಂಗಳೊಳಗೆ, 18 ಲಕ್ಷ ರೂಪಾಯಿ ಲಾಸ್ ಮಾಡಿಕೊಳ್ಳಲಾಯ್ತು. ಕನ್‌ಫೆಕ್ಷನರಿ ಪ್ರಾರಂಭ ಮಾಡುವುದಕ್ಕೆ ಯೋಗ್ಯವಾಗಿಲ್ಲವೆಂದು ಅರ್ಥವಾಗುವುದಿಲ್ಲವೇ? ಇವರು 1934ನೇ ಇಸವಿಯಿಂದ ಬೈಪ್ರೊಡಕ್ಟ್ ಯಾವ್ಯಾವುದು ಮಾಡಿದ್ದಾರೆ? ನಾನು ಅಧಿಕಾರಿಗಳ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇಲ್ಲಿ ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಿ.

[MR. CHAIRMAN (Sri S. D. KOTHAWALE) in the Chair].

ಇವತ್ತಿನ ದಿವಸ ಇದಕ್ಕೆ ಕಾರಣರು ಯಾರು? ಅದ್ದರಿಂದ ಇದಕ್ಕೆ ಒಂದು ವಿಚಾರಣಾ ಸಮಿತಿಯನ್ನು ಮಾಡಿದರೆ, ಇರತಕ್ಕಂತಹ ಸತ್ಯವನ್ನು ಕಂಡು ಹಿಡಿಯಬಹುದು. ಇದನ್ನೇ ಇಟ್ಟುಕೊಳ್ಳಲಿಕ್ಕೆ ಯೋಗ್ಯವಲ್ಲದವರು, ನಾಳೆ ಹೊಸ ಕಾರ್ಖಾನೆಗಳನ್ನು, ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಾರೆ ಎಂಬುದರಲ್ಲಿ ನನಗೆ ನಂಬಿಕೆಯಿಲ್ಲ.

ನಂಜನಗೂಡಿನಲ್ಲಿ ಸಿ.ಪಿ.ಸಿ.ಯವರು ಒಂದು ಕಾಟನ್ ಮಿಲ್ ಪ್ರಾರಂಭ ಮಾಡಿದರು. ಆ ಕಂಪೆನಿಯು ಲಿಕ್ವಿಡೇಶನ್ನಿಗೆ ಹೋಯ್ತು; 11 ಲಕ್ಷ ರೂಪಾಯಿಗೆ ಡಿಕ್ರಿಯಾಯ್ತು. ಸಿ.ಪಿ.ಸಿ ಯವರ ಮಕ್ಕಳು ಮೊರೆ ಇಟ್ಟರು. ಆದರೂ ಸರ್ಕಾರದವರು ಸುಮ್ಮನೆ ಕೂತುಬಿಟ್ಟರು. ಅದನ್ನು ಈಗ ಉತ್ತರ ಇಂಡಿಯಾದ ಸುಜಾತಾ ಇಂಡಸ್ಟ್ರಿಯವರು ಗಂಭೀರವಾಗಿ ನಡೆಸುತ್ತಿದ್ದಾರೆ. ನಮ್ಮ ದೇಶದಲ್ಲಿ ಸ್ಥಾಪನೆ ಮಾಡಿದ್ದನ್ನು ಕೊಂಡುಕೊಳ್ಳುವುದಕ್ಕೆ ದುಡ್ಡು ಇಲ್ಲ ಇವರಿಗೆ. ಇವತ್ತು 18 ಲಕ್ಷದ ರೂಪಾಯಿಯುವರೆಗೆ ಮಂತ್ರಿಗಳ ನಂಬಿಕೆ ಸಾರಿಗೆಗಳನ್ನು ಹೆಚ್ಚಿಸಲು ಹೊರಟಿದ್ದಾರೆ. ಅದೇ ರೀತಿ ನಂಜನಗೂಡಿನ ಪೇಪರ್ ಮಿಲ್. ಅದೂ ಲಿಕ್ವಿಡೇಶನ್‌ಗೆ ಹೋಯ್ತು. 10 ಲಕ್ಷಕ್ಕೆ ಡಿಕ್ರಿಯಾಯ್ತು. ದಯವಿಟ್ಟು ಸರ್ಕಾರದವರು ಒಪ್ಪಿಕೊಳ್ಳಿ ಎಂದರೆ, ನಮಗೆ ಬೇಡ, ನಮಗೆ ದುಡ್ಡು ಇಲ್ಲ. ಎಲ್ಲಾ ಮಿತವ್ಯಯ, ಎಲ್ಲಾ ಎಕಾನಮಿ ಎಂದು ಹೇಳುತ್ತಿದ್ದಾರೆ. ಈಗ ಆಫ್ರಿಕ ದೇಶದವರು ಕೊಂಡುಕೊಂಡು ಲಾಭಪಡೆಯುತ್ತಿದ್ದಾರೆ. ಇದು ಏಕೆ ಹೇಳುತ್ತಿದ್ದೇನೆಂದರೆ. "ಇದು ಮನೆಗೆ ಮಾರಿ, ಪರರಿಗೆ ಉಪಕಾರಿ" ಎಂಬಂತೆ ಆಗಿದೆ. ನಮ್ಮ ದೇಶದ ಬಂಡವಾಳ ಹೆಚ್ಚಿಸುವುದಕ್ಕೆ ಹೋದರೆ, ಸರ್ಕಾರಕ್ಕೆ ಸಹಾಯಕ್ಕೆ ಬರಲು ಶಕ್ತಿ ಇಲ್ಲ. ಉದಾಹರಣೆಗಳನ್ನು ಎಷ್ಟೋ ಕೊಡಬಹುದು. ಈಗ ಪೋರ್ಸಿಲಿನ್ ಕಾರ್ಖಾನೆಯ ಆಡಳಿತ, ಮೈಸೂರು ಲ್ಯಾಂಪ್ ಕಾರ್ಖಾನೆ ಆಡಳಿತ, ಇದಕ್ಕೆಲ್ಲಾ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಆಫೀಶಿಯಲ್ ವರ್ಗದಲ್ಲಿದ್ದಾರೆ. ಅದರ ಬಗ್ಗೆ ನಾವು ಕನಿಷ್ಠವಾದ ಅಭಿಪ್ರಾಯವನ್ನು ಹೊಂದಿಕೊಳ್ಳಬೇಕಾಗುತ್ತದೆ. ಯಾರಿಗೋ, ಏನೋ ಉಪಕಾರ ಮಾಡುವುದಕ್ಕೆ ಒಬ್ಬ ಡೈರೆಕ್ಟರ್ ಇದ್ದಾರೆಯೇ ಹೊರತು, ನಿಜವಾಗಿ ಮೈಸೂರು ದೇಶದಲ್ಲಿ ಕೈಗಾರಿಕೆಯ ಸ್ವರೂಪ ಹೇಗೆ ಇದೆ, ಅದನ್ನು ಉಳಿಸಿಕೊಳ್ಳಲು ನಾವು ಪ್ರಯತ್ನ ಮಾಡುತ್ತಾ ಇಲ್ಲ. ಹೊರಗಿನವರು ಬಂದು ನಮ್ಮ ದೇಶದ ಬಂಡವಾಳವನ್ನು ತಿನ್ನುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಕಪಿಲಾ ಟೆಕ್ಸ್‌ಟೈಲ್ ಮಿಲ್ ಹೊರಗಡೆ ಹೋಯ್ತು, ನಂಜನಗೂಡ್ ಪೇಪರ್ ಮಿಲ್ ಹೊರಗಡೆ ಹೋಯಿತು. ಮೈಸೂರು ಹತ್ತಿರ ಕಾವೇರಿ ವಾಲ ಪೇಪರ್‌ಮಿಲ್ ಪ್ರಾರಂಭ ಮಾಡಿದರು, ಅದಕ್ಕೆ ಸರ್ಕಾರದವರು ಸಹಾಯ ಕೊಡದಿದ್ದರೆ, ಅದೂ ಲಿಕ್ವಿಡೇಶನ್ ಸ್ಟೇಜಿಗೆ ಹೋಗುತ್ತದೆ. ಪಂಜಾಬು ನವರು ಅದಕ್ಕೆ ಕಣ್ಣು ಹಾಕುತ್ತಿದ್ದಾರೆ, ಬರ್ಲಾದವರು ಕಣ್ಣು ಹಾಕುತ್ತಿದ್ದಾರೆ. ಅದೇ ರೀತಿ ಬೆಂಗಳೂರಿಗೆ ಬರುತ್ತಾ, ಮಂಡ್ಯ ಪೇಪರ್ ಮಿಲ್ಸ್ ಇದೆ, ಮುಂದಕ್ಕೆ ರೆಮ್‌ಕೊ, ಭಾರತ್ ಫೈಬ್ಸ್ ಮುಂತಾದ ಕಾರ್ಖಾನೆಗಳು ಇವೆ. ಬರ್ಲಾದವರು ಮೈಸೂರು ಸಿಮೆಂಟನ್ನು ತೆಗೆದುಕೊಂಡಿದ್ದಾರೆ. ಮೊದಲು ಅದನ್ನು ಸಾರಂಗಪಾಣಿ ಎಂಬುವರು ಸ್ಟಾರ್ಟ್ ಮಾಡಿದರು. ಈಗ ಬರ್ಲಾದವರಿಗೆ ಕೊಟ್ಟು ಇಲ್ಲಿ ತೆರು ಮಾಡಬೇಡಿ ಎಂದು ಹೇಳುವುದಿಲ್ಲ. ನಿಮ್ಮ ಆರ್ಥಿಕ ನೀತಿ ಏನು, ನಿಮ್ಮ ಸ್ವದೇಶಿ ಭಂಡವಾಳ ಪೂರೈಸುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಈ ಒಂದು ಹೆಬ್ಬಾವು ಕೇಂದ್ರ ಸರ್ಕಾರವನ್ನು ನುಂಗತಕ್ಕದ್ದು, ಇಲ್ಲಿಯೂ ನುಂಗಲು ಏನೂ ಕಷ್ಟವಿಲ್ಲ. ಈಗ ಹಪಾರಿ ಕಮಿಟಿ ವರದಿ ಅವರ ಮುಂದೆ ಇದೆ. ಹೀಗೆ ಮುಂದುವರಿಯುತ್ತಾ ನಮ್ಮ ಕ್ಯಾಪಿಟಲನ್ನು ತಿಂದುಕೊಂಡು ನಾವು ಪಾಪರರಾಗುತ್ತಿದ್ದೇವೆ. ಯಾವ ಕೈಗಾರಿಕೆಯನ್ನೂ ತೆಗೆದು

ಕೊಳ್ಳಿ, ಅದರಲ್ಲೂ ಸರ್ಕಾರಿ ಆಡಳಿತದಲ್ಲಿರತಕ್ಕ ಕೈಗಾರಿಕೆಗಳು ಚಿಂತಾಜನಕ ಸ್ಥಿತಿಯಲ್ಲಿವೆ. ನೀವು ಇಷ್ಟು ಡೈರೆಕ್ಟರುಗಳನ್ನು ಇಟ್ಟುಕೊಂಡು, ಒಂದು ಕೈಗಾರಿಕಾ ನೀತಿಯಲ್ಲಿ ಹೋಗುತ್ತಾ ಇಲ್ಲ. ಒಂದು ಪ್ರಯೋರಿಟಿಯಲ್ಲಿ ಅಭಿವೃದ್ಧಿ ಮಾಡುತ್ತಾ ಇಲ್ಲ. ಇವತ್ತು ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂದು ನೋಡುತ್ತಿಲ್ಲ. ನಮ್ಮ ರಾಜ್ಯದಲ್ಲಿ ಹಿಂದೆ ಸ್ಥಾಪನೆಯಾದ ಭದ್ರಾವತಿ ಕಾರ್ಖಾನೆ, ಗೇರು ಸೊಪ್ಪೆಯ ಹತ್ತಿರ ಒಂದು ಸ್ಥಾಪನೆಯಾಗಿದೆಯೇ ಹೊರತು, ಬೇರೆ ಯಾವ ಒಂದು ಭಾರಿ ಉದ್ಯಮವನ್ನು ನಿಮ್ಮ ಕಾಲದಲ್ಲಿ ಸ್ಥಾಪಿಸಿ, ನೀವು ಹೆಸರು ಗಳಿಸಿದ್ದೀರಿ? ಕೇಂದ್ರ ಸರ್ಕಾರದ ಎಚ್. ಎಂ. ಟಿ. ಇವೆಲ್ಲಾ ಬಂದಿದೆಯೇ ಹೊರತು, ನಿಮ್ಮ ಭಂಡವಾಳದಲ್ಲಿ ಯಾವ ಒಂದು ದೊಡ್ಡ ಉದ್ಯಮವನ್ನು ಮಾಡಿ ಜಯಶೀಲರಾಗಿದ್ದೀರಿ, ಹೆಸರು ಗಳಿಸಿದ್ದೀರಿ? ಭದ್ರಾವತಿ, ಶಿವನ ಸಮುದ್ರ ಎಲ್ಲಾ ಆ ಕಾಲದ್ದು. ನಿಮ್ಮ ಕಾಲದಲ್ಲಿ ಯಾವುದನ್ನೂ ನೀವು ಮಾಡಿಲ್ಲ. ಕಾರಣ ಏನೆಂದರೆ, ಇರುವ ಅಲ್ಪಸ್ವಲ್ಪ ದುಡ್ಡನ್ನು ಚೆಲ್ಲಿಬಿಡುತ್ತೀರಿ. ನಮ್ಮ ಸ್ವದೇಶಿ ಕಾರ್ಖಾನೆಗಳು ಮೈನೂರು ದೇಶದಲ್ಲಿ ಕಷ್ಟಕ್ಕೆ ಸಿಕ್ಕಿಕೊಂಡಾಗ, ನೀವು ಕೈ ಬಿಡುತ್ತೀರಿ. ಅಂಥ ಕಾಲದಲ್ಲಿ ಯಾವುದೋ, ಹದ್ದು ಬಂದು ಇದನ್ನು ಎತ್ತಿಕೊಂಡು ಹೋಗುತ್ತದೆ. ಹೀಗಿದ್ದರೆ ಕೈಗಾರಿಕೆಗಳು ಕುಂಠಿತವಾಗುತ್ತದೆಂದು ಹೇಳುತ್ತೇನೆ.

ಇನ್ನು ಒಂದೆರಡು ಮಾತುಗಳನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳಬೇಕೆಂದಿದ್ದೇನೆ.

Mr. CHAIRMAN.—The hon'ble member's time is over. The difficulty is that the Chair is requested to stick to the time schedule drawn up by the Whips.

Sri L. SRIKANTAIAH.—Then I close my speech, Sir.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ಮೂರು ಬೇಡಿಕೆಗಳು ಅಂದರೆ, ವ್ಯವಸಾಯ, ಕೈಗಾರಿಕೆ ಮತ್ತು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಚರ್ಚೆಯಾಗುವ ಸಂದರ್ಭದಲ್ಲಿ ನಾನಾದರೂ ಕೆಲವು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ವ್ಯವಸಾಯದ ವಿಚಾರವಾಗಿ ಈಗ ಆಗುತ್ತಾ ಇರತಕ್ಕ ಕೆಲವು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀ ರಾಮೇಗೌಡರು ರೈತರಿಗೆ ಈಗ ಏನೇನು ಸಿಗುತ್ತಿದೆ, ಏನೇನು ಸಿಗುತ್ತಾ ಇಲ್ಲ, ಉಳುವ ಹಾಗೂ ಬೆಳೆಯುವ ರೈತ ನಾದವನಿಗೇ ಆಹಾರ ಎಷ್ಟರಮಟ್ಟಿಗೆ ಆಗುತ್ತಿದೆ, ಆಗುತ್ತಾ ಇಲ್ಲವೆನ್ನುವುದನ್ನು ಬಹಳ ಚೆನ್ನಾಗಿ ವಿಶದಪಡಿಸಿದ್ದಾರೆ. ದಯಮಾಡಿ ಅದನ್ನು ಜಾಗ್ರತೆಯಾಗಿ ಸರಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಿನ ಕಾಲ ಹೈಬ್ರಿಡ್ ಜೋಳವನ್ನು ಜಾಸ್ತಿಯಾಗಿ ಉತ್ಪತ್ತಿ ಮಾಡುವ ಕಾಲ. ಇಂತಹ ಕಾಲದಲ್ಲಿ ಬಿತ್ತನೆ ಬೀಜಗಳು ಏನಿವೆಯೋ ಅವನ್ನು ಸೊಸೈಟಿಗಳ ಮುಖಾಂತರ ಮಾರಬೇಕೆಂದು ನಿಗದಿಯಾಗಿದೆ. ಈಗ ಅದನ್ನು ಕೊಯಮತ್ತೂರಿನಲ್ಲಿ ಕೇವಲ 8 ರೂಪಾಯಿಗಳಿಗೆ ಮಾರುತ್ತಿದ್ದರೆ ಗುಂಡ್ಲುಪೇಟೆಯಲ್ಲಿ 12-13 ರೂಪಾಯಿಗಳಿಗೆ ಮಾರುತ್ತಿದ್ದಾರೆ. ಅದನ್ನು ಒಂದೂವರೆಯಷ್ಟು ಬೆಲೆಗೆ ಇಲ್ಲಿ ಮಾರುತ್ತಿದ್ದಾರೆ. ಆದ್ದರಿಂದಲೇ ಅದರ ಉಪಯೋಗ ಅರ್ಧಕ್ಕೆ ಇಳಿಯಿತು. ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ಸ್, ಮತ್ತು ಕೆಲವು ಸೊಸೈಟಿಗಳ ಅಧಿಕಾರಿಗಳು ಅದನ್ನು ರಾಭಕ್ಕೆ ಮಾರುವುದಲ್ಲದೆ ರೈತರಿಗೆ ತುಂಬಾ ಅನ್ಯಾಯಮಾಡುತ್ತಿದ್ದಾರೆ. ಅಂತಹವರನ್ನು ಹಾಕಿದರೆ ಏನೂ ಉಪಯೋಗವಿಲ್ಲ. ಇಂಥಾದ್ದನ್ನು ಪೂರ್ತಿಯಾಗಿ ತಪ್ಪಿಸಿ ಬಿತ್ತನೆಬೀಜಗಳು ರೈತರಿಗೆ ಸರಿಯಾದ ರೀತಿಯಲ್ಲಿ ದೊರಕುವಂತೆ ಮಾಡಬೇಕು. ಒಂದುವೇಳೆ ಹೈಬ್ರಿಡ್ ಜೋಳ ಸಾಕಷ್ಟು ದೊರಕಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ ಅದಕ್ಕೆ ಬದಲಾಗಿ ಸಾಕಾಗುವಷ್ಟು ರಾಸಾಯನಿಕ ಗೊಬ್ಬರವನ್ನಾದರೂ ನರಬರಾಜು ಮಾಡಬೇಕು.

ಇನ್ನು ಫರ್ಟಿಲೈಜರ್ಸ್ ಇಟ್ಟುಕೊಂಡಿರುವವರು ಈಗ ಅದರ ಬೆಲೆಯನ್ನು ಸೇಕಡ 57 ರಷ್ಟು ಜಾಸ್ತಿಮಾಡಿದ್ದಾರೆ. ಇದಕ್ಕಾಗಿ ಸರ್ಕಾರದವರು ಸಬ್ಸಿಡೈಜ್ ಮಾಡದೇ ಇದ್ದರೆ ಆಗುವುದಿಲ್ಲ. ಈಗ ರೂಪಾಯಿಯ ಡಿ-ವ್ಯಾಲ್ಯುಯೇಷನ್ ಆಗಿರುವುದರಿಂದ ಇನ್ಸೆಕ್ಟಿಸೈಡ್ಸ್ ಮತ್ತು ಪೆಸ್ಟಿಸೈಡ್ಸ್ ಬೆಲೆ ಜಾಸ್ತಿಯಾಗಿ ಅವು ಹೆಚ್ಚಿಗೆ ಸಿಗುತ್ತಾ ಇಲ್ಲ. ಅದಕ್ಕಾಗಿ ನುಳಿಗೆ ಹುಳು ಬಿದ್ದಾಗ ಆ ಔಷಧಿಗಳನ್ನು ಉಪಯೋಗಿಸುವುದಕ್ಕಾಗಿ ಅವು ಆಯಾ ಗ್ರಾಮ ಪಂಚಾಯತಿಗಳಲ್ಲಿ ಸಿಗುವ ಹಾಗೆ ಮತ್ತು ಸೊಸೈಟಿಯವರ ಮುಂಖಾಂತರ ಸಿಗುವ ಹಾಗೆ ವ್ಯವಸ್ಥೆಮಾಡಬೇಕು.

ಇನ್ನು ಟ್ರಾಕ್ಟರ್ಸ್ ಮತ್ತು ಡೀಸಲ್ ಪಂಪ್ಸ್ ಇಟ್ಟುಕೊಂಡಿರುವವರು ಡೀಸಲ್ ಖರೀದಿ ಬಹಳ ಜಾಸ್ತಿಯಾಗಿದೆ, ವ್ಯಾಪಾರನ್ನರು ಡೀಸಲ್‌ಗೆ ಸೀಮೆ ಎಣ್ಣೆಯನ್ನು ವಿಶೇಷವಾಗಿ ಬೆರೆಸುತ್ತಿದ್ದಾರೆಂದು ಹೇಳಿದರು. ಅದರಿಂದಾಗಿ ಟ್ರಾಕ್ಟರುಗಳಿಂದ ಈಗ ಅಷ್ಟಾಗಿ ಕೆಲಸವೇನೂ ಆಗುತ್ತಾ ಇಲ್ಲ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಆದ್ದರಿಂದ ಈಗ ಒಳ್ಳೆಯ ಡೀಸಲ್ ಆಯಲನ್ನು ನಬ್ಸಿಡೈಜ್ಡ್ ರೇಟ್‌ನಲ್ಲಿ ಕೊಡಬೇಕು. ಈಗ ಡಿ-ವ್ಯಾಲ್ಯುಯೇಷನ್ ಆದಮೇಲೆ ಟ್ರಾಕ್ಟರುಗಳಿಗೋಸ್ಕರ ಸಾಲ ಕೇಳಿದವರಿಗೆ 25 ಸಾವಿರ ರೂಪಾಯಿಗಳಷ್ಟು ಸಾಲವನ್ನು ಕೊಡಬಹುದೆಂದು ನಿಗದಿಮಾಡಿದ್ದಾರೆ. ಅದರ ಬೆಲೆ ಈಗ ಜಾಸ್ತಿಯಾಗಿರುವುದರಿಂದ ಇರಾಖಿಯಿಂದ ಅವನ್ನು ರಿಲೀಜ್ ಮಾಡಿದರೆ ಕಂಪೆನಿಯವರೇ, ತೆಗೆದುಕೊಳ್ಳಲು ಸಿದ್ಧರಾಗುತ್ತಿದ್ದರು. ಡಿ-ವ್ಯಾಲ್ಯುಯೇಷನ್ ಆಗುವುದಕ್ಕೆ ಮುಂಚೆ ವಿನಾಕಾರಣ ಈ ಕಾಗದಗಳನ್ನು ಇಟ್ಟುಕೊಂಡು ಅವರಿಗೆ ಕೊಡದೆ ಬೆಲೆಗಳು ಜಾಸ್ತಿಯಾಗಿವೆ. ಆದರೂ ಸಾಲಗಳನ್ನು ಜಾಸ್ತಿ ಕೊಡುತ್ತಾ ಇಲ್ಲ. ಎಷ್ಟೋ ಆಧಾರ ಕೊಟ್ಟರೂ ಸಾಲ ಕೊಡುತ್ತಾ ಇಲ್ಲ. ಇದರಿಂದ ಟ್ರಾಕ್ಟರುಗಳು ಅವರಿಗೆ ದೊರಕುತ್ತಾ ಇಲ್ಲ. ಮಾನ್ಯ ಶ್ರೀ ರಾಮೇಗೌಡರು ಹೇಳಿದ ಹಾಗೆ ರಿಜಿಸ್ಟ್ರೇಷನ್ ಕಾಲದಲ್ಲಿ ಅನೇಕರು 700 ರೂಪಾಯಿಗಳನ್ನು ಸಾಲ್‌ವೆನ್ಸಿ ಸರ್ಟಿಫಿಕೇಟಿಗೆ ಖರ್ಚುಮಾಡಿದ್ದಾರೆ. ಮುಂದೆ ಬರುವವರಿಗೆ 3 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಇದೇ ರೀತಿಯಾಗಿ ಹಿಂಪೆ ಅದಕ್ಕಾಗಿ ಅಪ್ಲೈ ಮಾಡಿರುವವರಿಗೂ ಸಾಲವನ್ನು ಕೊಡಿಸಬೇಕು.

ಇನ್ನು ಸಾಯಿಲ್ ಕನ್‌ಸರ್‌ವೇಷನ್ ವಿಚಾರದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಮಾತ್ರ ಮಾಡುತ್ತೇವೆಂದು ಹೇಳಿದ್ದಾರೆ. ಈ ಸಾಯಿಲ್ ಕನ್‌ಸರ್‌ವೇಷನ್ ಮಾಡುವಾಗ ಎಲ್ಲ ರೇನ್‌ಫಾಲ್ ಕಡಿಮೆಯಾಗಿದೆ, ಎಲ್ಲ ಅಭಾವ ಪರಿಸ್ಥಿತಿಯುಂಟಾಗಿದೆ ಎಂಬುದನ್ನು ಮನಗಂಡು ಆ ತಾಲ್ಲೂಕಿಗೆ ಪ್ರೈಯಾರಿಟಿ ಕೊಡಬೇಕು. ಆದರೂ ಜಾಗ್ರತೆಯಾಗಿ ಸಾಯಿಲ್ ಕನ್‌ಸರ್‌ವೇಷನ್ ಕೆಲಸವನ್ನು ಸರ್ಕಾರದವರು ತೆಗೆದುಕೊಳ್ಳಬೇಕು.

ಇನ್ನು ಅರ್ಧಕೆಲಸ ಆಗಿರುವ ಬಾವಿಗಳಿಗೆ ಈಗ ಸರ್ಕಾರದವರು ಕೊಡುತ್ತಿರುವ ಹಣ ಏನೂ ಸಾಲುವುದಿಲ್ಲ. ಅವು ಅರ್ಧಂಬರ್ಧವಾಗಿ ನಿಲ್ಲುವುದಕ್ಕೆ ಬದಲಾಗಿ ಬೋರ್ ಹಾಕಿ ಡೈನಾಮಾಯಿಟ್ ಹಾಕಿ ಬಾವಿಗಳನ್ನು ಕಟ್ಟಿಸಿದರೆ ಒಳ್ಳೆಯದು. ಇನ್ನಷ್ಟು ಹಣ ಕೊಟ್ಟು ಬಾವಿಗಳನ್ನು ಪೂರೈಸಬೇಕು. ಅದಕ್ಕೆ ಕೂಡಲೇ ಸರ್ಕಾರದವರು ಅವಕಾಶಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಅಗ್ರಿಕಲ್‌ಚರಲ್ ಕಾಲೇಜಿನಲ್ಲಿ ಸೀಟುಗಳನ್ನು ಕೊಡುವ ವಿಷಯದಲ್ಲಿ ಕೇವಲ ಮಾರ್ಕ್ಸ್ ನೋಡಿ ತೆಗೆದುಕೊಳ್ಳುತ್ತಾರೆ. ಹಾಗೆ ಮಾಡಿದರೆ ಹಳ್ಳಿಗಳಿಂದ ಬರತಕ್ಕ ಮಕ್ಕಳಿಗೆ ಅನುಕೂಲ ವಿರುವುದಿಲ್ಲ. ಇದರಲ್ಲಿ ಹಳ್ಳಿಗೂ ಪಟ್ಟಣಕ್ಕೂ ಸಂಬಂಧಬರುವುದಿಲ್ಲ. ಮುಖ್ಯವಾಗಿ ಬೇಕಾಗಿರುವುದು ಹಳ್ಳಿಯ ಮಕ್ಕಳಿಗೆ ಸೀಟುಗಳನ್ನು ಕಾಲೇಜ್‌ಗಳಲ್ಲಿ ಹಂಚುವಾಗ ಅವರಿಗೆ ಹೆಚ್ಚಿನ ಸೀಟುಗಳನ್ನು ಹಂಚಬೇಕು. ಅವರಿಗೆ ರಿಜರ್ವೇಷನ್ ಜಾಸ್ತಿ ಕೊಡಬೇಕೆಂದು ಕೇಳುತ್ತೇನೆ.

ಇನ್ನು ಕೈಗಾರಿಕೆಗಳ ವಿಷಯದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕೆಂದು ನನ್ನ ಅಭಿಪ್ರಾಯ. ವ್ಯವಸಾಯದಲ್ಲಿ ರೇಷ್ಮೆ ಕೈಗಾರಿಕೆ ಏನಿದೆ, ಅದರ ಒಂದು ಉತ್ಪಾದನೆ ಏನಿದೆ ಅದು ಹೆಣ್ಣುಮಕ್ಕಳ ಕೈಗಾರಿಕೆ ಎಂದು ಹೇಳುತ್ತೇನೆ. ಏಕೆಂದರೆ ಸೊಪ್ಪು ಕೀಳುವುದರಿಂದ ಹಿಡಿದು ನೂಲು ತೆಗೆಯುವವರೆಗೂ ಹೆಣ್ಣುಮಕ್ಕಳೇ ವಿಶೇಷವಾಗಿ ಕೆಲಸ ಮಾಡುತ್ತಾರೆ. ಇಂತಹ ಒಂದು ಕೈಗಾರಿಕೆಗೆ ನಿಜವಾಗಿ ಇವತ್ತಿನದಿವಸ ಪೆಟ್ಟು ಧಕ್ಕೆ ಬೀಳುತ್ತಿದೆ. ಇದೇಕೋ ನನಗೆ ಬಹಳ ವ್ಯಸನವಾಗುತ್ತದೆ. ನಮ್ಮ ತಾಲ್ಲೂಕಿನೊಳಗೆ ಮಳೆ ಇಲ್ಲದೆ ಯಾವಾಗಲೂ ಬರ ಬರುವ ಕಾಲದಲ್ಲಿ ಈ ಕೈಗಾರಿಕೆಯಿಂದ ಎಷ್ಟೋ ಜನಗಳು ಜೀವನಮಾಡುತ್ತಿದ್ದರು. ಈಗ ಏನಾಗಿದೆಯೆಂದರೆ ಹೆಣ್ಣು ಮಕ್ಕಳು ಇಷ್ಟು ಕಷ್ಟಪಟ್ಟು ರೇಷ್ಮೆಯನ್ನು ತಯಾರುಮಾಡಿ ಗೂಡು ಸಿದ್ಧ ಮಾಡಿದರೆ ಮಾರ್ಕೆಟ್ ಮಾಡುವುದಕ್ಕೆ ಸರ್ಕಾರದವರು ಹಿಂದೆ ಏನು ಮಾರ್ಗಗಳನ್ನು ಅನುಸರಿಸುತ್ತಿದ್ದರೋ ಅದನ್ನೇ ಈಗಲೂ ಮಾಡುತ್ತಿದ್ದಾರೆ ಅಲ್ಲಿಂದಿಲ್ಲಿಗೆ ಹಣ ಸಿಗುತ್ತದೆಂದು ಆ ರೀತಿ ಮಾಡುತ್ತಿದ್ದಾರೆ. ಸರ್ಕಾರೀ ಫಿಲೇಚರ್ಸ್ ಪ್ರತಿನಿಧಿಗಳು ಇಲ್ಲಿ ಬಂದು ಅದನ್ನು ಹರಾಜಿಗೆ ತರುತ್ತಿದ್ದರು. ಖಾಸಗೀ ರೀಲರ್ಸ್‌ನವ ಇಲ್ಲಿಗೆಬಂದು ಕೇನ್ ಕಾಂಪಿಟಿಷನ್ ಒಬ್ಬರಿಗೊಬ್ಬರಿಗೆ ಬರುತ್ತಿದ್ದುದರಿಂದ ರೈತರಿಗೆ 4 ಕಾಸು ಸಿಗುತ್ತಿತ್ತು. ಈಗ ಅದು ಕಮರ್ಷಿಯಲ್ ಟ್ರೇಡ್ ಆಗಿರುವುದರಿಂದ ಅವರೇ ನಮ್ಮ ಫೀಲೇಚರ್ ಬಾಗಿಲಿಗೆ ತೆಗೆದುಕೊಂಡು ಬರಲಿ ಎಂದು ಹೇಳುತ್ತಾರೆ. ಹೆಣ್ಣುಮಕ್ಕಳು ಯಾರು ಅಲ್ಲಗೆ ತೆಗೆದುಕೊಂಡು ಹೋಗುವುದಿಲ್ಲ. ರಾಮನಗರ, ನರಸೀಪುರ, ನಂಜನಗೂಡು, ಮತ್ತು ಕೊಳ್ಳೇಗಾಲ-ಇವುಗಳಿಗೆ ಯಾರಿಂದರೋ ಕಳುಹಿಸುತ್ತಾರೆ, ಅಲ್ಲಿಗೆ ತೆಗೆದುಕೊಂಡು ಹೋದವೇಲೆ ಏನಾಗುತ್ತದೆ. ಕೆಲವರು ರಿಂಗಾಗಿ ಸ್ಮಶಾನಕ್ಕೆ ಹೋದ ಹೆಣದ ಹಾಗೆ ಅಲ್ಲಿ ಎಷ್ಟು ದುಡ್ಡು ಹೋಗುತ್ತದೋ ಅಷ್ಟು ದುಡ್ಡನ್ನು ಸುರಿದು ವಾಪಸ್ಸು ಬರುತ್ತಿದ್ದಾರೆ ಕೊನೆಗೆ ಫಿಲೇಚರ್ ಬೇಡವೆಂದು ಹೇಳಿ ಕೇಳಿದಷ್ಟು ದುಡ್ಡನ್ನು ಕೊಟ್ಟು ವಾಪಸ್ಸು ಬರುತ್ತಿದ್ದಾರೆ. ನನ್ನ ತಾಲ್ಲೂಕಿನೊಳಗೆ 2-3 ಮಾರ್ಕೆಟ್ಸ್